ರಾಯಚೂರು, ಕೊಪ್ಪಳ, ಯಾದಗಿರಿ, ಕಲಬುರ್ಗಿ, ಬಳ್ಳಾರಿ, ವಿಜಯನಗರ, ಬೀದರ, ಏಕಕಾಲಕ್ಕೆ ಪ್ರಕಟಣೆ
Raichur, Koppal, Yadagiri, Kalburgi, Ballary, Vijaya Nagar, Bidar

# ಕನ್ನಡ ಮಾತೃಭೂಮಿ

ರಾಯಚೂರಿನಿಂದ ರಾಜ್ಯದವರೆಗೆ

ಕನ್ನಡದಿನ ಪತ್ರಿಕೆ

KANNADA MATHRUBHOOMI
KANNADA DAILY PAPER

ಸಂಪಾದಕರು : ಶ್ಯಾಮ್ ಸುಂದರ್.ಎಲ್
EDITOR : SHYAM SUNDER L

mathrubhoomircr@gmail.com
Call : 9886635117

ಸಂಪುಟ : Volume : 03 ಸಂಚಿಕೆ Issuse : 153 ದಿನಾಂಕ : 03-04-2026 Date : 03-04-2026 ಶುಕ್ರವಾರ Friday
RNI: Karkan/20223/89199
Post Reg No.: RCR/L/RNP/98/2025-2027
ರಾಯಚೂರು Raichur ಪುಟ : Pages : 04 ರೂ Rs. 2

# ಕಾನೂನು ಸುವ್ಯವಸ್ಥೆಗೂ ಜಿಡಿಪಿಗೂ ನೇರ ಸಂಬಂಧವಿದೆ-ಸಿಎಂ

**ಬೆಂಗಳೂರು,ಏ.2**-ಸೈಬರ್ ಅಪರಾಧಗಳು ಸೇರಿದಂತೆ ನಾನಾ ಅಪರಾಧಗಳಲ್ಲಿ ನಮ್ಮ ರಾಜ್ಯ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದ್ದು ಇದನ್ನು ಕಟ್ಟುನಿಟ್ಟಾಗಿ ತಡೆಗಟ್ಟಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದರು. ಕೋರಮಂಗಲದ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆಟಿ ಕಾರ್ಯಕ್ರಮದಲ್ಲಿಟಿಮುಖ್ಯ ಮಂತ್ರಿಗಳ ಪದಕಟಿ ಪ್ರದಾನ ಮಾಡಿ ಮಾತನಾಡಿದರು.

ಯಾವುದೇ ಪೊಲೀಸ್ ಠಾಣೆಯ ವ್ಯಾಪ್ತಿ ಯಲ್ಲಿ ಆಯಾ ಠಾಣಾಧಿಕಾರಿಯ ಗಮನಕ್ಕೆ ಬರದಂತೆ ಯಾವುದೇ ಅಪರಾಧಗಳು, ಕೆಟ್ಟ ವ್ಯವಹಾರಗಳು ನಡೆಯಲು ಸಾಧ್ಯವಿಲ್ಲ ಎನ್ನುವುದು ನನ್ನ ನಂಬಿಕೆ. ಹಲವು ರೀತಿಯ ಅಪರಾಧ ಪ್ರಕರಣಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿ ಶಿಕ್ಷೆ ಪ್ರಮಾಣದಲ್ಲಿ ಕರ್ನಾಟಕ ರಾಜ್ಯ ಮುಂದಿದೆ. ಇದಕ್ಕಾಗಿ ಪೊಲೀಸ್ ಇಲಾಖೆಯನ್ನು ಅಭಿನಂದಿಸುವ ಜೊತೆಗೆ ಪ್ರಮಾಣ ಹೆಚ್ಚಾಗಿರುವ ಅಪರಾಧಗಳ ನಿಯಂತ್ರಣದಲ್ಲೂ ನಾವು ಶ್ರಮ ಹಾಕಬೇಕಿದೆ ಎಂದು ಸೂಚಿಸಿದರು.

ಸೈಬರ್ ಅಪರಾಧಗಳು ಸೇರಿದಂತೆ ನಾನಾ ರೀತಿಯ ಅಪರಾಧಗಳನ್ನು ತಡೆಯಲು ತಂತ್ರಜ್ಞಾನದ ಅವಕಾಶ ಬಳಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಸಮಯದ ಮಿತಿ



ಇಲ್ಲದಂತೆ ದಿನದ 24 ಗಂಟೆಯೂ ಕರ್ತವ್ಯಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡುವುದರಿಂದ ಸಮಾಜದಲ್ಲಿ ನೆಮ್ಮದಿ ಮತ್ತು ಸೌಹಾರ್ದತೆ ನೆಲೆಸಿದೆ ಎಂದರು. ಮಹಿಳೆಯರು, ಮಕ್ಕಳು ಮತ್ತು ದುರ್ಬಲರು ಹಾಗೂ ಅಸಹಾಯಕರ ನಮ್ಮ ಸರ್ಕಾರ ರಕ್ಷಣೆಗೆ ಮೊದಲ ಆದ್ಯತೆ ನೀಡುತ್ತಿದೆ. ಪೊಲೀಸರೂ ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದರು.

ರಾಜ್ಯದ ಆರ್ಥಿಕ ಬೆಳವಣಿಗೆಗೂ, ಜಿಡಿಪಿ ಪ್ರಗತಿಗೂ ರಾಜ್ಯದ ಕಾನೂನು ಸುವ್ಯವಸ್ಥೆಗೂ ನೇರಾ ನೇರಾ ಸಂಬಂಧ ಇರುತ್ತದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಪೊಲೀಸ್ ಇಲಾಖೆ ಕಾರ್ಯನಿರ್ವಹಿಸಿದರೆ ಆರ್ಥಿಕತೆಗೂ ದೊಡ್ಡ ಕೊಡುಗೆ ಕೊಟ್ಟಂತಾಗುತ್ತದೆ ಎಂದರು. ಕರ್ನಾಟಕ ಡ್ರಗ್ಸ್ ಮುಕ್ತ ರಾಜ್ಯ ಆಗಬೇಕು ಎನ್ನುವ ಗುರಿ ನಮ್ಮ ಸರ್ಕಾರದ್ದಾಗಿದೆ. ಇದು ಪೊಲೀಸ್ ಇಲಾಖೆಯ ಗುರಿ ಯೂ ಆಗಬೇಕಿದೆ ಎಂದರು. ಪದಕ ವಿಜೇತರೆಲ್ಲರಿಗೂ ಶುಭಾಶಯ ಕೋರಿದ ಮುಖ್ಯಮಂತ್ರಿಗಳು, ಇವರ ಕಾರ್ಯ ಮತ್ತು ವೃತ್ತಿಪರತೆ ಇತರರಿಗೂ ಸ್ಫೂರ್ತಿಯಾಗಲಿ ಎಂದು ಹಾರೈಸಿದರು. ಗೃಹ ಸಚಿವರಾದ ಜಿ.ಪರಮೇಶ್ವರ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ.ಎಂ.ಎ.ಸಲೀಂ ಅವರುಗಳು ಉಪಸ್ಥಿತರಿದ್ದರು.

## ಕೆಪಿಸಿಎಲ್: 233 ಹುದ್ದೆಗಳಿಗೆ ನೇಮಕಾತಿ ಆದೇಶ ವಿತರಿಸಿ, ಸ್ಥಳ ನಿಯುಕ್ತಿ- ಗೌರವ್ ಗುಪ್ತಾ

**ಬೆಂಗಳೂರು,ಏ.2**-ಕರ್ನಾಟಕ ವಿದ್ಯುತ್ ನಿಗಮ ನಿಯಮಿತ(ಕೆಪಿಸಿಎಲ್)ದಲ್ಲಿ ಭರ್ತಿ ಮಾಡಲಾಗುತ್ತಿರುವ 622 ಹುದ್ದೆಗಳ ಪೈಕಿ ಮೊದಲ ಹಂತದಲ್ಲಿ 233 ಹುದ್ದೆಗಳಿಗೆ ನೇಮಕಾತಿ ಆದೇಶಗಳನ್ನು ವಿತರಿಸಿ ಗುರುವಾರ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗಿದೆ.

ಗುರುವಾರ ನಡೆದ ಕೌನ್ಸೆಲಿಂಗ್‌ನಲ್ಲಿ ಆಯ್ಕೆಯಾದ 20 ಸಹಾಯಕ ಇಂಜಿನಿಯರ್ (ಸಿವಿಲ್), 38 ಸಹಾಯಕ ಇಂಜಿನಿಯರ್ (ಇಲೆಕ್ಟ್ರಿಕಲ್), 20 ಸಹಾಯಕ ಇಂಜಿನಿಯರ್ (ಮೆಕ್ಯಾನಿಕಲ್), 27 ಸಹಾಯಕ ಇಂಜಿನಿಯರ್ (ಇನ್‌ಸ್ಟ್ರುಮೆಂಟೇಷನ್), 13 ಕಿರಿಯ ಎಂಜಿನಿಯರ್ (ಸಿವಿಲ್), 61 ಸಹಾಯಕ ಇಂಜಿನಿಯರ್ (ಇಲೆಕ್ಟ್ರಿಕಲ್), 41 ಕಿರಿಯ ಇಂಜಿನಿಯರ್ (ಮೆಕ್ಯಾನಿಕಲ್), 2 ಕೆಮಿಸ್ಟ್ ಹಾಗೂ 11 ಕೆಮಿಕಲ್ ಸೂಪರ್ ವೈಸರ್ ಹುದ್ದೆಗಳ ಅಭ್ಯರ್ಥಿಗಳಿಗೆ ಸ್ಥಳ ನಿಯುಕ್ತಿ ಮಾಡಲಾಗಿದೆ. ಉಳಿದ ಹುದ್ದೆಗಳಿಗೆ ದಾಖಲೆಗಳ ನೈಜತೆ ಪರಿಶೀಲನಾ ಕಾರ್ಯ ನಡೆಯುತ್ತಿದ್ದು, ಬಳಿಕ ನೇಮಕಾತಿ ಆದೇಶ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ತಿಳಿಸಿದರು. ಕೌನ್ಸೆಲಿಂಗ್ ವೇಳೆ ➘ 2

## ತೇಜಸ್ ಸ್ಟಾರ್ಟ್ ಅಪ್ ಕಾರ್ಯಾಗಾರ: ಕೈಗಾರಿಕೆಗಳ ಸ್ಟಾರ್ಟ್ ಅಪ್ ಉತ್ತೇಜನಗೊಂಡಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಸಾಧ್ಯ-ಬೋಸರಾಜ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2**-ಯಾವುದೇ ಒಂದು ಜಿಲ್ಲೆಯು ಅಭಿವೃದ್ಧಿಹೊಂದಲು ಅಲ್ಲಿನ ಕೈಗಾರಿಕೆಗಳು ಅಭಿವೃದ್ಧಿ ಹೊಂದುವುದು ಮತ್ತು ಅಲ್ಲಿನ ಯುವಕರು ಉದ್ಯಮಿಗಳಾಗುವುದು ಬಹಳ ಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಯುವಕರಿಗೆ ಸ್ಟಾರ್ಟ್ ಅಪ್ ಕುರಿತು ಮಾಹಿತಿ ತಿಳಿಸಲು ಬಂದಿರುವ ಸಂಪನ್ಮೂಲ ವ್ಯಕ್ತಿಗಳ ಸಲಹೆಗಳನ್ನು ಪಡೆದು ಕಾರ್ಯಾಗಾರವನ್ನು ಸದುಪಯೋಗಪಡೆದುಕೊಳ್ಳಲು ಪ್ರತಿಯೊಬ್ಬರು ಮುಂದಾಗಬೇಕು ಎಂದು ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿಚ ಎನ್.ಎಸ್.ಬೋಸರಾಜು ಹೇಳಿದರು.

ಅವರಿಂದು ನಗರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ಭಾರತ ಸರ್ಕಾರ, ಉದ್ಯಮ ಮತ್ತು ಆಂತರಿಕ ವ್ಯಾಪಾರ




ಉತ್ತೇಜನ ಇಲಾಖೆ, ಸ್ಟಾರ್ಟ್‌ಅಪ್ ಇಂಡಿಯಾ ಯೋಜನೆ, ಕರ್ನಾಟಕ ಸರ್ಕಾರ ಹಾಗೂ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ತೇಜಸ್ ಕಾರ್ಯಾಗಾರವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ರಾಯಚೂರು ಜಿಲ್ಲೆ ಮಹಾತ್ವಾಕಾಂಕ್ಷೆ ಜಿಲ್ಲೆಯಾಗಿದ್ದು, ಜಿಲ್ಲೆಗೆ ಹಲವು ವರ್ಷಗಳಿಂದ ಹಿಂದುಳಿದ ಜಿಲ್ಲೆಯೆಂಬ ಹಣೆಪಟ್ಟಿಯಿದ್ದು, ಅದನ್ನು ತೆಗೆದುಹಾಕಲು ಇಲ್ಲಿ ಕೈಗಾರಿಕೆಗಳು ಅಭಿವೃದ್ಧಿ ಹೊಂದಬೇಕು ಮತ್ತು ಸ್ಟಾರ್ಟ್‌ಅಪ್‌ಗಳು ಬೆಳೆಯಬೇಕು. ಸ್ಟಾರ್ಟ್‌ಅಪ್‌ಗೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರದಿಂದ ಹೊಸ ಯೋಜನೆ ರೂಪಿಸಿದ್ದು, ಈ ನಿಟ್ಟಿನಲ್ಲಿ ದೇಶದಲ್ಲಿ ಮೊದಲ ತರಬೇತಿ ಕಾರ್ಯಾಗಾರವನ್ನು ರಾಯಚೂರಿನಲ್ಲಿ ಹಮ್ಮಿಕೊಂಡಿರುವುದು ಸಂತಸದ ವಿಚಾರವಾಗಿದೆ ಎಂದರು.

ಯಾವುದೇ ಸ್ಟಾರ್ಟ್‌ಅಪ್ ಬೆಳೆಯಲು ಕಚ್ಚಾ ವಸ್ತು ಮತ್ತು ಮಾರುಕಟ್ಟೆ ಅತ್ಯಂತ ಮುಖ್ಯವಾಗಿರುತ್ತದೆ. ರಾಯಚೂರು ಜಿಲ್ಲೆಯಲ್ಲಿ ಈ ಎರಡು ಸೌಲಭ್ಯಗಳಿದ್ದು, ಇಲ್ಲಿನ ಜನರು ಕಾರ್ಯಾಗಾರವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಇದೇ ವೇಳೆ ಜಿಲ್ಲಾಧಿಕಾರಿ ಕೆ.ನಿತೀಶ ಮಾತನಾಡಿ, ಸ್ಟಾರ್ಟ್‌ಅಪ್ ಎಂಬುವುದು ಕೇವಲ ಬೆಂಗಳೂರು, ಮುಂಬೈ, ಹೈದ್ರಾಬಾದ್ ➘ 2

## ನೀರಿದ್ದ ಬಕೆಟ್‌ಗೆ ಬಿದ್ದು 11 ತಿಂಗಳ ಮಗು ಮೃತ: ಮಗನ ಸಾವಿಗೆ ತಾನೇ ಕಾರಣ ಎಂದು ಟೆಕ್ಕಿ ತಾಯಿ ಆತ್ಮಹತ್ಯೆ

**ಬೆಂಗಳೂರು,ಏ.2**-ನೀರಿದ್ದ ಬಕೆಟ್‌ನಲ್ಲಿ 11 ತಿಂಗಳ ಗಂಡು ಮಗು ಬಿದ್ದು ಉಸಿರುಗಟ್ಟಿ ಸಾವನ್ನಪ್ಪಿದೆ. ಘಟನೆಗೆ ತಾನೇ ಕಾರಣ ಎಂದು ಮನನೊಂದ ತಾಯಿಯೂ ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ಚಂದ್ರಾಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಆಗಸ್ತ್ಯೆ ಸಾವನ್ನಪ್ಪಿದ ಮಗು. ಪ್ರತಿಭಾ (29) ಆತ್ಮಹತ್ಯೆಗೆ ಶರಣಾದ ತಾಯಿ. ಬುಧವಾರ ಮಧ್ಯಾಹ್ನ ಘಟನೆ ನಡೆದಿರುವುದು ತಡವಾಗಿ ಬೆಳಕಿಗೆ ಬಂದಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ತಾಯಿ - ➘ 2

## ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಗ್ರಾಮ ಪಂಚಾಯ್ತಿಗಳು ನಿಗಾವಹಿಸಿ ನೀರಿನ ಟ್ಯಾಂಕ್ ಸ್ವಚ್ಛಗೊಳಿಸದೇ ಹೊದಲ್ಲಿ ಕ್ರಮ-ಈಶ್ವರ ಕಾಂದೂ ಎಚ್ಚರಿಕೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2**-ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಓವರ್ ಹೆಡ್ ಟ್ಯಾಂಕ್‌ಗಳೆಲ್ಲವನ್ನೂ ಸ್ವಚ್ಛಗೊಳಿಸಿರುವುದಾಗಿ ಮಾಹಿತಿ ನೀಡಲಾಗಿದೆ. ಈ ಮಾಹಿತಿಗಳ ಬಗ್ಗೆ ಸಂದೇಹವಿದ್ದು, ಸ್ಥಳ ಪರಿಶೀಲನೆ ಮಾಡಲಾಗುವುದು ಒಂದು ವೇಳೆ ತಪ್ಪು ಮಾಹಿತಿ ನೀಡಿದ್ದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರಕುಮಾರ ಕಾಂದೂ ತಾಕೀತು ಮಾಡಿದರು.

ಅವರಿಂದು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿವಿಧ ಯೋಜನೆಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇವದುರ್ಗ ಹಾಗೂ ಅರಕೇರಾ ತಾಲೂಕುಗಳಲ್ಲಿರುವ 169 ಟ್ಯಾಂಕ್‌ಗಳ ಪೈಕಿ 148 ಟ್ಯಾಂಕ್‌ಗಳು ಸ್ವಚ್ಛಗೊಳಿಸಲಾಗಿದೆ. ಮಾನ್ವಿ ವ್ಯಾಪ್ತಿಯ 88 ಟ್ಯಾಂಕ್‌ಗಳಲ್ಲಿ 74 ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಲಾಗಿದೆ. ಮಸ್ಕಿಯಲ್ಲಿ 104, ಸಿರವಾರ 63 ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸಿದ್ದು, ಉಳಿದಂತೆ ಲಿಂಗಸುಗೂರು 144, ರಾಯಚೂರು 188 ಹಾಗೂ ಸಿಂಧನೂರು ತಾಲೂಕುಗಳಲ್ಲಿನ 169 ಟ್ಯಾಂಕ್‌ಗಳ ಪೈಕಿ ಎಲ್ಲಾ ಒಎಚ್‌ಟಿ ಟ್ಯಾಂಕಗಳನ್ನು ಸ್ವಚ್ಛಗೊಳಿಸಲಾಗಿದೆ ಎಂಬ ಮಾಹಿತಿಯನ್ನು ನೀಡಿದ್ದು, ಅನುಮಾನವಿದೆ ಎಂದರು. ಇದಲ್ಲದೇ ಜಿಲ್ಲೆಯ 744 ಶುದ್ಧ ಕುಡಿಯುವ ನೀರಿನ ಪ್ಲಾಂಟ್‌ಗಳಲ್ಲಿ ➘ 2

## ಜಿಲ್ಲಾ ಪೊಲೀಸ್ ಧ್ವಜ ದಿನಾಚರಣೆ: ಪೊಲೀಸ್ ಧ್ವಜ ಕರ್ತವ್ಯ ನಿಷ್ಟೆಯ ಪ್ರತೀಕ-ಬಸವರಾಜ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2**-ಪೊಲೀಸ್ ಧ್ವಜವು ಶಿಸ್ತು, ಕರ್ತವ್ಯ ನಿಷ್ಠೆ, ಕಾನೂನು ಪಾಲನೆ ಮತ್ತು ರಕ್ಷಣೆಯ ಸಂಕೇತವಾಗಿದೆ. ಸಮಾಜದ ರಕ್ಷಣೆ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಪೊಲೀಸರಿಗೆ ಸಾರ್ವಜನಿಕರ ಸಹಕಾರ ಅತ್ಯಗತ್ಯವಾಗಿರುತ್ತದೆ ಎಂದು ನಿವೃತ್ತ ಆರಕ್ಷಕ ಉಪ ನಿರೀಕ್ಷಕರಾದ ಬಸವರಾಜ ಹೇಳಿದರು.

ಅವರಿಂದು ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಪೊಲೀಸರು ಎಲ್ಲಿ ಕರ್ತವ್ಯ ನಿರ್ವಹಿಸುತ್ತಾರೋ ಅಲ್ಲಿ ಧ್ವಜ ಇರುತ್ತದೆ. ಪೊಲೀಸ್ ಧ್ವಜದ ಗೌರವ ಎತ್ತಿ ಹಿಡಿಯುವುದು ಪೊಲೀಸರ ಕರ್ತವ್ಯವಾಗಿದೆ ಎಂದರು.

ಇಂದು ಪೋಲೀಸ್ ಇಲಾಖೆಗೆ ಮಹತ್ವದ ದಿನವಾಗಿ

## ಮುಖ್ಯಮಂತ್ರಿಗಳ ಪದಕ ಪ್ರಶಸ್ತಿಗೆ ಡಿವೈಎಸ್‌ಪಿ ಶಾಂತವೀರ ಆಯ್ಕೆ

**ರಾಯಚೂರು,ಏ.2**-ಸಾಧಕ ಪೊಲೀಸ್ ಅಧಿಕಾರಿಗಳಿಗೆ ನೀಡುವ ಮುಖ್ಯಮಂತ್ರಿಗಳ ಪದಕ ಪ್ರಶಸ್ತಿಗೆ ರಾಯಚೂರು ಡಿವೈಎಸ್‌ಪಿ ಶಾಂತವೀರ ಆಯ್ಕೆಯಾಗಿದ್ದಾರೆ. 2025 ಸಾಲಿಗೆ ರಾಜ್ಯದ ಐದು ಜನ ಪೊಲೀಸ್ ಅಧಿಕಾರಿಗಳನ್ನು ಆಯ್ಕೆ ಮಾಡಲಾಗಿದ್ದು, ಐದು ಜನರಲ್ಲಿ ಡಿವೈಎಸ್ಪಿ ಶಾಂತವೀರ ಒಬ್ಬರಾಗಿದ್ದಾರೆ.



ಮುಖ್ಯಮಂತ್ರಿಗಳ ಪದಕ ಪ್ರಶಸ್ತಿಗೆ ಆಯ್ಕೆಯಾದ ಶಾಂತವೀರರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ಹಾಂಗಿರಿ ಹಾಗೂ ಹೆಚ್ಚುವರಿ ಅಧಿಕಾರಿಗಳಾದ ಕುಮಾರಸ್ವಾಮಿ, ಹರೀಶ ಅಭಿನಂದಿಸಿದ್ದಾರೆ.

## ನದಾಫ್ ಪಿಂಜಾರ ಅಭಿವೃದ್ಧಿ ನಿಗಮದ ಯೋಜನೆಗಳು ಬೇರೆ ಜಿಲ್ಲೆಯ ಜನರಿಗೆ ತಲುಪಿಸಿ-ಖಾಸಿಂಸಾಬ್ ಎಳ್ಳೆಮನೆ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2**-ನದಾಫ್ ಅಭಿವೃದ್ಧಿ ನಿಗಮದಿಂದ ಅರ್ಹರಿಗೆ ಅನುದಾನ ತಲುಪಿಸಲು ಸರ್ಕಾರ ಎಚ್ಚರಿಕೆವಹಿಸಬೇಕೆಂದು ಖಾಸಿಂಸಾಬ್ ಎಳ್ಳೆಮನೆ ಆಗ್ರಹಿಸಿದರು. ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ಪಿಂಜಾರ ಸಮೂದಾಯ ಶೈಕ್ಷಣಿಕವಾಗಿ, ಸಮಾಜಿಕವಾಗಿ ಮುಖ್ಯವಾಹಿನಿಗೆ ಬರಲು ರಾಜ್ಯ ಸರ್ಕಾರ ರಾಜ್ಯ ನದಾಫ್ ಅಭಿವೃದ್ಧಿ ನಿಗಮ ಸ್ಥಾಪಿಸುವದಾಗಿ ಹೇಳಿದೆ. ಸಮೂದಾಯ ಜನರಿಗೆ ಯೋಜನೆಗಳನ್ನು ತಲುಪಿಸಲು ಕ್ರಮಕ್ಕೆ ಮುಂದಾಗಬೇಕು.

ಸರ್ಕಾರ ವಿವಿಧ ಯೋಜನೆಗಳು ನಿಗಮದಿಂದ ಜಾರಿಗೊಳಿಸಲು ಕೂಡಲೇ ಮುಂದಾಬೇಕೆಂದರು. ಸಮಾಜ ಕೆಲವರು ಮಾತ್ರ ಯೋಜನೆಗಳ ಲಾಭ ಪಡೆಯುತ್ತಿದ್ದು ಇತರೆ ಜಿಲ್ಲೆಗಳಿಗೆ ಅನುದಾನ ಹಂಚಿಕೆಯಾಗುತ್ತಿಲ್ಲ. ಕೆಲವೇ ಕೆಲವರಿಗೆ ಮಾತ್ರ ಯೋಜನೆಗಳು ತಲುಪದಂತೆ ನಿಗಮದ ಅಧಿಕಾರಿಗಳು ಗಮನಹರಿಸಬೇಕು.

ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಗಂಗಾ ಕಲ್ಯಾಣ , ಸಾಲದ ಯೋಜನೆಗಳು ಎಲ್ಲಾ ಜಿಲ್ಲೆಗಳ ಪಿಂಜಾರ ➘ 2

## ಡಿ.ಕೆ.ಶಿವುಕುಮಾರ ಮುಖ್ಯಮಂತ್ರಿಯಾಗಲಿ ಎಂದು ಪ್ರಾರ್ಥಿಸಿ ಅಭಿಮಾನಿಗಳಿಂದ ವಿಶೇಷ ಪೂಜೆ

■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2**-ಕೆಪಿಸಿಸಿ ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವುಕುಮಾರ ಇವರು ಮುಖ್ಯಮಂತ್ರಿಗಳಾಗಿ ಎಂದು ಪ್ರಾರ್ಥಿಸಿ ಡಿ.ಕೆ.ಶಿವುಕುಮಾರ ಅಭಿಮಾನಿಗಳ ಸಂಘದಿಂದ ನಗರ ಓಂ ಸಾಯಿ ಧ್ಯಾನಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಶ್ರೀಸಾಯಿಬಾಬಾರ ಮುಂದೆ ಡಿ.ಕೆ.ಶಿವುಕುಮಾರ ಮುಖ್ಯಮಂತ್ರಿಗಳಾಗಲಿ ಎಂದು ಪ್ರಾರ್ಥಿಸಿದ ಪೋಸ್ಟರ್‌ಗಳನ್ನಿಟ್ಟು ಪೂಜೆ ಸಲ್ಲಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಮೊಹ್ಮದ ರಿಯಾಜ್ ಮಾತನಾಡಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರಲು ಕಾರಣೀಕರ್ತರಾದ ಡಿ.ಕೆ.ಶಿವುಕುಮಾರ ಇವರು ಮುಖ್ಯಮಂತ್ರಿಗಳಾಗಬೇಕೆನ್ನುವದು ಕಾರ್ಯಕರ್ತರು ಆಶಯವಾಗಿದೆ. ➘ 2



## ಏ.4 ರಂದು ಜಮಾಅತೆ ಇಸ್ಲಾಂ ಹಿಂದ್‌ನಿಂದ ಈದ್ ಸೌಹಾರ್ದ ಕೂಟ-ಸಲೀಂ ಪಾಷಾ



■ ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2**-ಜಮಾಅತೆ ಇಸ್ಲಾಮ್ ಹಿಂದ್ ಜಿಲ್ಲಾ ಘಟಕದಿಂದ ಏ.4 ರಂದು ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಸಂಜೆ 7.30ಕ್ಕೆ ಈದ್ ಸೌಹಾರ್ದ ಕೂಟವನ್ನು ಆಯೋಜಿಸಲಾಗಿದೆ ಎಂದರು ಜಮಾ ಅತೆ ಇಸ್ಲಾಮ್ ಹಿಂದ್ ಜಿಲ್ಲಾ ಸಂಚಾಲಕ ಸಲೀಂ ಪಾಷಾ ಹೇಳಿದರು.

ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿ, ಒಂದು ತಿಂಗಳ ಉಪವಾಸ ವ್ರತ ಆಚರಿಸಿ ರಂಜಾನ್ ಹಬ್ಬವನ್ನು ಆಚರಿಸಲಾಗಿದೆ.

ಪ್ರತಿಯೊಬ್ಬರಿಗೂ ಹಬ್ಬದ ಸಂತೋಷ ತಲುಪಿಸಲು ಈದ್ ಸೌಹಾರ್ದ ಕೂಟ ಆಯೋಜಸಲಾಗಿದೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕಿಲ್ಲೆ ಬೃಹನ್ಮಠದ ಶ್ರೀಶಾಂತಮಲ್ಲ ಶಿವಾಚಾರ್ಯರು, ಮೆಥೊಡಿಸ್ಟ್ ಚರ್ಚನ ಜಿಲ್ಲಾ ವ್ಯವಸ್ಥಾಪಕ ರೆವೆಡೆಂಡ್ ಫಾದರ್ ಆರ್.ಸಾಮ್ವೆಲ್, ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜ, ಸಂಸದ ಜಿ.ಕುಮಾರನಾಯಕ, ಶಾಸಕ ಡಾ.ಶಿವರಾಜ ಪಾಟೀಲ್ ಆಗಮಿಸಲಿದ್ದಾರೆ.

ಅತಿಥಿಗಳಾಗಿ ಕಾಂಗ್ರೆಸ್ ಮುಖಂಡರುಗಳಾದ ಮೊಹ್ಮದ ಶಾಲಂ, ಡಾ.ರಜಾಕ್ ಉಸ್ತಾದ್, ಡಾ.ಜೆ.ಸಾಜಿದ್ ಸಮೀರ್, ಬಸವ ಕೇಂದ್ರ ನಾಗನಗೌಡ ಹರವಿ, ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯ ಬಷೀರುದ್ದೀನ್, ಕೆ.ಅಸ್ಲಂ ಪಾಷಾ ಆಗಮಿಸಲಿದ್ದಾರೆ. ಜಮಾತೆ ಇಸ್ಲಾಮ ಹಿಂದ್‌ನ ಹಾಮೀದ್ ಮೊಹ್ಮದ್ ➘ 2

# ಮಧ್ಯಪ್ರಾಚ್ಯ ಬಿಕ್ಕಟ್ಟಿಂದ ರಸಗೊಬ್ಬರ ಕೊರತೆಯಾಗದಂತೆ ಕೃಷಿ ಇಲಾಖೆ ಮುಂಜಾಗ್ರತಾ ಕ್ರಮ



**ಬೆಂಗಳೂರು,ಏ.2-**ಮಧ್ಯಪ್ರಾಚ್ಯ ಯುದ್ಧದಿಂದ 2026ರ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಕೊರತೆಯಾಗದಂತೆ ಸಮರ್ಪಕ ಪೂರೈಕೆ ಮತ್ತು ಪರಿಣಾ ಮಕಾರಿ ನಿರ್ವಹಣೆಗೆ ಕೃಷಿ ಇಲಾಖೆ ಕಠಿಣ ಕ್ರಮಗಳನ್ನು ಜಾರಿಗೊಳಿಸಲು ಮುಂದಾಗಿದೆ.

ಕೇಂದ್ರ ಸರ್ಕಾರ ರಾಜ್ಯಕ್ಕೆ ಒಟ್ಟು 30.05 ಲಕ್ಷ ಮೆಟ್ರಿಕ್ ಟನ್ ವಿವಿಧ ಗೊಬ್ಬರ ಹಂಚಿಕೆ ಮಾಡಿದ್ದು, ಏಪ್ರಿಲ್ 1ರ ವೇಳೆಗೆ 11.42 ಲಕ್ಷ ಮೆಟ್ರಿಕ್ ಟನ್ ಸಂಗ್ರಹ ಲಭ್ಯವಿದೆ. ರಾಜ್ಯವು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ **(KSCMF)** ಮತ್ತು ಕರ್ನಾಟಕ ರಾಜ್ಯ ಬೀಜ ನಿಗಮ**(KSSC)** ಮೂಲಕ ಕಾಪು ದಾಸ್ತಾನು ವ್ಯವಸ್ಥೆಯನ್ನು ಬಲಪಡಿಸಿದೆ. ಪ್ರಸ್ತುತ 28,224 ಮೆಟ್ರಿಕ್ ಟನ್ ಗೊಬ್ಬರ ಕಾಪು ದಾಸ್ತಾನಿನಲ್ಲಿ ಲಭ್ಯವಿದ್ದು, ಯೂರಿಯಾ ಮತ್ತು ಡಿಎಪಿ ಗೊಬ್ಬರಗಳ ಶೇ.25 ಕಡ್ಡಾಯವಾಗಿ ಸಂಗ್ರಹಿಸಲು ನಿರ್ದೇಶಿಸಲಾಗಿದೆ.ಜಿಲ್ಲಾವಾರು ಗೊಬ್ಬರ ಹಂಚಿಕೆ ಕಳೆದ ಮೂರು ವರ್ಷಗಳ ಸರಾಸರಿ ಬಳಕೆಯನ್ನು ಆಧರಿಸಿ ಮರು ನಿರ್ಧಾರ ಮಾಡಲಾಗಿದೆ. ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸೂಕ್ಷ್ಮ ಯೋಜನೆ ರೂಪಿಸಿ ಪೂರೈಕೆ ಸಮತೋಲನ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಯೂರಿಯಾ ಬಳಕೆಯನ್ನು ನಿಯಂತ್ರಿಸಲು **FRUITS (Farmer Registration and Unified beneficiary Information System)** ಡೇಟಾ ಬೇಸ್ ಆಧಾರಿತ ಯೂರಿಯಾ ಡಿಸ್ಟ್ರಿಬ್ಯೂಷನ್ ಆ್ಯಪ್ **(Urea Distribution App)** ಅಭಿವೃದ್ಧಿ ಪಡಿಸಲಾಗಿದ್ದು, ರೈತರ ಭೂ ಹಿಡುವಳಿ ಮತ್ತು ಬೆಳೆ ಮಾದರಿಯನ್ನು ಆಧರಿಸಿ ಯೂರಿಯಾ ಮಾರಾಟವನ್ನು ನಿಯಂತ್ರಿಸಲಾಗುತ್ತಿದೆ. ಈ ಆಪ್ಲಿಕೇಷನ್ ಈಗಾಗಲೇ ಎಂಟು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಯಲ್ಲಿದ್ದು, ಮುಂದಿನ ಮುಂಗಾರು ಹಂಗಾಮಿನಲ್ಲಿ ರಾಜ್ಯಾದ್ಯಾಂತ ವಿಸ್ತಾರಗೊಳ್ಳಲಿದೆ. ಗಡಿಗಳಲ್ಲಿ ಚೆಕ್ ಪೋಸ್ಟ್ ಮೂಲಕ ನಿಗಾ: ಕೃಷಿ ಹೊರತಾದ ಕೃಷಿ ಚಟುವಟಿಕೆಗಳಿಗೆ ಸಹಾಯ ಧನದ ಯೂರಿ ಯಾ ದುರುಪಯೋಗವನ್ನು ತಡೆಯಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಿಶೇಷ ಸಮಿತಿಗಳನ್ನು ರಚಿಸಲಾಗಿದೆ. ಈ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಲ್ಲಿ **FCO**-1985 ಮತ್ತು **ECA**-1985 ನಿಯಮಗಳಡಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಅಂತಾರಾಜ್ಯ ಗಡಿಗಳಲ್ಲಿ ಚೆಕ್‌ಪೋಸ್ಟ್‌ಗಳ ಮೂಲಕ ಯೂರಿಯಾ ಅನಧಿಕೃತ ಸಾಗಣೆಯನ್ನು ತಡೆಯಲು ಕಟ್ಟುನಿಟ್ಟಿನ ನಿಗಾ ವಹಿಸಲಾಗುತ್ತಿದೆ. ಜೊತೆಗೆ ಪ್ರತಿ ವಾರ ವಿಡಿಯೋ ಕಾನ್ಫರೆನ್ಸ್ ಸಭೆಗಳ ಮೂಲಕ ಗೊಬ್ಬರ ಪೂರೈಕೆ, ಮಾರಾಟ ಮತ್ತು ಸಂಗ್ರಹ ಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲಾಗುತ್ತದೆ. ರೈತರಲ್ಲಿ ಸಮತೋಲಿತ ಗೊಬ್ಬರ ಬಳಕೆ ಸಾವಯವ ಕೃಷಿ, ಜೈವಿಕ ಗೊಬ್ಬರ ಮತ್ತು ನೈಸರ್ಗಿಕ ಕೃಷಿ ಕುರಿತು ಜಾಗೃತಿ ಮೂಡಿಸಲಾಗುತ್ತದೆ. ವಸುಧಾಮೃತ ಯೋಜನೆ ಯಡಿ ರೈತರಿಗೆ ರಿಯಾಯಿತಿ ದರದಲ್ಲಿ ಸಾವಯವ ಹಾಗೂ ಜೈವಿಕ ಗೊಬ್ಬರಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಒಟ್ಟಾರೆ 2026ರ ಮುಂಗಾರು ಹಂಗಾಮಿನಲ್ಲಿ ಗೊಬ್ಬರ ಕೊರತೆ ಉಂಟಾಗದಂತೆ ಕೃಷಿ ಇಲಾಖೆ ಮತ್ತಷ್ಟು ಮುನ್ನೆಚ್ಚರಿಕಾ ಹಾಗೂ ನಿಯಂತ್ರಣ ಕ್ರಮಗಳನ್ನು ಕಠಿಣವಾಗಿ ಜಾರಿಗೊಳಿಸಲು ಮುಂದಾಗಿದೆ.

- **ಹಿನ್ನೆಲೆ**
  - **ಮಧ್ಯಪ್ರಾಚ್ಯ ಯುದ್ಧದಿಂದ ಗೊಬ್ಬರ ಸರಬರಾಜಿನ ಆತಂಕ**
  - **ಮುಂಗಾರು ಹಂಗಾಮಿಗೆ ಮುನ್ನ ಮುನ್ನೆಚ್ಚರಿಕೆ ಕ್ರಮಗಳು**
  - **ರೈತರಿಗೆ ಗೊಬ್ಬರ ಕೊರತೆ ಆಗದಂತೆ ಯೋಜನೆ**
- **ಗೊಬ್ಬರ ಹಂಚಿಕೆ ಸ್ಥಿತಿ**
  - **ಕೇಂದ್ರದಿಂದ ಒಟ್ಟು ಹಂಚಿಕೆ: 30.05 ಲಕ್ಷ ಮೆಟ್ರಿಕ್ ಟನ್**
  - **ಏಪ್ರಿಲ್ 1ಕ್ಕೆ ಲಭ್ಯ ಸಂಗ್ರಹ: 11.42 ಲಕ್ಷ ಮೆಟ್ರಿಕ್ ಟನ್**
  - **ರಾಜ್ಯ ಮಟ್ಟದಲ್ಲಿ ಸಮರ್ಪಕ ಯೋಜನೆ**
- **ಕಾಪು ದಾಸ್ತಾನು ವ್ಯವಸ್ಥೆ**
  - **KSCMF KSSC ಮೂಲಕ ಸಂಗ್ರಹ ಬಲಪಡ್ಕೆ**
  - **ಪ್ರಸ್ತುತ ಸಂಗ್ರಹ: 28,224 ಮೆಟ್ರಿಕ್ ಟನ್**
  - **ಯೂರಿಯಾ ಈಅಕ ಗೊಬ್ಬರ: 25% ಕಡ್ಡಾಯ ಸಂಗ್ರಹ**
- **ಜಿಲ್ಲಾವಾರು ಹಂಚಿಕೆ**
  - **ಕಳೆದ 3 ವರ್ಷದ ಸರಾಸರಿ ಬಳಕೆಯ ಆಧಾರ**
  - **ತಾಲೂಕು ಹೋಬಳಿ ಮಟ್ಟದಲ್ಲಿ ಯೋಜನೆ**
  - **ಪೂರೈಕೆ ಸಮತೋಲನ ಕಾಯ್ದುಕೊಳ್ಳುವುದು**
- **ತಂತ್ರಜ್ಞಾನ ಬಳಕೆ**
  - **FRUITS ಡೇಟಾಬೇಸ್ ಆಧಾರಿತ ವ್ಯವಸ್ಥೆ**
  - **Urea Distribution App ಅಭಿವೃದ್ಧಿ**
  - **ರೈತರ ಭೂಮಿ ಬೆಳೆ ಆಧಾರಿತ ನಿಯಂತ್ರಣ**
  - **ಈಗ 8 ಜಿಲ್ಲೆಗಳಲ್ಲಿ ಪ್ರಯೋಗ**
- **ನಿಯಂತ್ರಣ ಕ್ರಮಗಳು**
  - **ಅನಧಿಕೃತ ಯೂರಿಯಾ ಬಳಕೆ ತಡೆ**
  - **ರಾಜ್ಯ ಜಿಲ್ಲಾ ಮಟ್ಟದಲ್ಲಿ ಸಮಿತಿಗಳು**
  - **FCO-1985 ECA-1985 ಅಡಿಯಲ್ಲಿ ಕ್ರಮ**
- **ಗಡಿ ನಿಗಾವಳಿ**
  - **ಚೆಕ್ ಪೋಸ್ಟ್ ಮೂಲಕ ಕಟ್ಟುನಿಟ್ಟಿನ ನಿಗಾ**
  - **ಅಕ್ರಮ ಸಾಗಣೆ ತಡೆ**
  - **ವಾರದ ವಿಡಿಯೋ ಕಾನ್ಫರೆನ್ಸ್ ಮೂಲಕ ಮೇಲ್ವಿಚಾರಣೆ**
- **ರೈತರ ಜಾಗೃತಿ**
  - **ಸಮತೋಲಿತ ಗೊಬ್ಬರ ಬಳಕೆ ಪ್ರಚಾರ**
  - **ಸಾವಯವ ಜೈವಿಕ ಕೃಷಿ ಉತ್ತೇಜನ**
  - **ನೈಸರ್ಗಿಕ ಕೃಷಿಗೆ ಒತ್ತು**

## ಬಂಗಾಳ ಎಸ್ಐಆರ್ ಪ್ರಕ್ರಿಯೆ: ಬೆದರಿಕೆ ಬಂದಲ್ಲಿ ಕೇಂದ್ರ ಪಡೆ ನಿಯೋಜಿಸಿ- ಸುಪ್ರೀಂ ಕೋರ್ಟ್

**ನವದೆಹಲಿ,ಏ.2-**ಪಶ್ಚಿಮ ಬಂಗಾಳದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆಯ (ಎಸ್ಐಆರ್) ಮೇಲೆ ನಿಗಾ ವಹಿಸಲು ಸುಪ್ರೀಂ ಕೋರ್ಟ್ ನ್ಯಾಯಾಂಗ ಅಧಿಕಾರಿಗಳನ್ನು ನೇಮಿಸಿದೆ. ಇದೀಗ, ಆ ನ್ಯಾಯಾಂಗ ಅಧಿಕಾರಿಗಳ ವಿರುದ್ಧವೇ ದೌರ್ಜನ್ಯ ಮತ್ತು ಬೆದರಿಕೆ ಹಾಕಿದ ಪ್ರಕರಣಗಳು ಬೆಳಕಿಗೆ ಬಂದಿದ್ದು, ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಬಂಗಾಳದ ಮಾಲ್ಡಾ ಜಿಲ್ಲೆಯಲ್ಲಿ ಚುನಾವಣಾ ಆಯೋಗದ ಎಸ್ಐರ್ಆ ಪ್ರಕ್ರಿಯೆಯ ಭಾಗವಾಗಿರುವ ಮೂವರು ಮಹಿಳಾ ಅಧಿಕಾರಿಗಳು ಸೇರಿದಂತೆ 7 ನ್ಯಾಯಾಂಗ ಅಧಿಕಾರಿಗಳಿಗೆ ಅಲ್ಲಿನ ಗುಂಪೊಂದು ಬೆದರಿಕೆ ಹಾಕಿದ್ದನ್ನು ಸುಪ್ರೀಂ ಕೋರ್ಟ್ ಗಂಭೀರವಾಗಿ ಪರಿಗಣಿಸಿದೆ.

ಲಜ್ಜೆಗೆಟ್ಟ, ದುರುದ್ದೇಶಪೂರ್ವಕ ಪ್ರಯತ್ನ- ಸುಪ್ರೀಂ ಕೋರ್ಟ್ ಗರಂ: ಈ ಘಟನೆ ನ್ಯಾಯ ವ್ಯವಸ್ಥೆಗೆ ಅಡ್ಡಿಪಡಿಸುವ ಲಜ್ಜೆಗೆಟ್ಟ ಮತ್ತು ದುರುದ್ದೇಶಪೂರ್ವಕ ಪ್ರಯತ್ನ ಎಂದು ಟೀಕಿಸಿರುವ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು, ಈ ಬಗ್ಗೆ ಎಚ್ಚರಿಸಿದ್ದರೂ ಸೂಕ್ತ ಕ್ರಮ ಕೈಗೊಳ್ಳದ ರಾಜ್ಯದ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದೆ. ಅಲ್ಲದೇ, ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರು ಸೇರಿದಂತೆ ಹಿರಿಯ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್‌ಗಳನ್ನು ನೀಡಿದೆ.

ಬಂಗಾಳದಲ್ಲಿ ಕೇಂದ್ರ ಪಡೆಗಳನ್ನು ನಿಯೋಜಿಸಿ: ಬಂಗಾಳದಲ್ಲಿನ ನ್ಯಾಯಾಂಗ ಅಧಿಕಾರಿಗಳಿಗೆ ಗಂಟೆಗಳ ಕಾಲ ನೀರು, ಆಹಾರ ನೀಡದೆ ಹಿಂಸಿಸಲಾಗಿದೆ. ಅವರಿದ್ದ ಕಚೇರಿಗಳಿಗೆ ತೆರಳಿ ಗುಂಪೊಂದು ಬೆದರಿಕೆ ಹಾಕಿದ್ದನ್ನು ಕೋರ್ಟ್ ಗಮನಿಸಿದ್ದು, ಅಧಿಕಾರಿಗಳ ಸುರಕ್ಷತೆ ಮತ್ತು ಎಸ್ಐರ್ಆ ಪ್ರಕ್ರಿಯೆ ಸುಗಮವಾಗಿ ನಡೆಯಲು ಕೇಂದ್ರ ರಕ್ಷಣಾ ಪಡೆಗಳನ್ನು ನಿಯೋಜಿಸುವಂತೆ ಚುನಾವಣಾ ಆಯೋಗಕ್ಕೆ ಕೋರ್ಟ್ ನಿರ್ದೇಶನ ನೀಡಿದೆ.

ಬಂಗಾಳದಲ್ಲಿ ಈ ಬೆಳವಣಿಗೆಗಳು ತೀವ್ರ ನಿರಾಶೆ ಮೂಡಿಸಿದೆ. ನ್ಯಾಯಾಂಗ ಅಧಿಕಾರಿಗಳಿಗೆ ಭಯ ಅಥವಾ ಅಡಚಣೆಯಿಲ್ಲದೆ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಅವಕಾಶ ನೀಡಬೇಕು ಎಂದು ಈ ಹಿಂದಿನ ವಿಚಾರಣೆಯಲ್ಲೂ ಸೂಚಿಸಲಾಗಿತ್ತು. ಆದರೆ, ಈಗ ನಡೆಯುತ್ತಿರುವ ಘಟನೆಗಳು ನಾಚಿಕೆಗೇಡಿನ ಸಂಗತಿಯಾಗಿವೆ. ಕಾನೂನಿನ ನಿಯಮಗಳನ್ನೇ ಗಾಳಿಗೆ ತೂರಿದಂತಾಗಿದೆ. ಇದು ನ್ಯಾಯ ವ್ಯವಸ್ಥೆಗೇ ಹಾಕಿದ ನೇರ ಸವಾಲಾಗಿದೆ. ಯಾವುದೇ ವ್ಯಕ್ತಿ ಅಥವಾ ಗುಂಪು ಕಾನೂನನ್ನು ಕೈಗೆತ್ತಿಕೊಳ್ಳಲು ಅನುಮತಿ ನೀಡಬಾರದು ಎಂದು ನ್ಯಾಯಾಲಯ ಖಡಕ್ ಆಗಿ ಹೇಳಿದೆ. ಎಸ್ ಐಆರ್ ಕರ್ತವ್ಯದಲ್ಲಿರುವ ನ್ಯಾಯಾಂಗ ಅಧಿಕಾರಿಗಳಿಗೆ ರಕ್ಷಣೆ ನೀಡಲು ಸುಪ್ರೀಂ ಕೋರ್ಟ್ ಕೆಲವು ಮಧ್ಯಂತರ ನಿರ್ದೇಶನಗಳನ್ನೂ ನೀಡಿತು.

## ಹಾವು ಕಡಿತದಿಂದ ಮೂರು ವರ್ಷಗಳಲ್ಲಿ 277 ಮಂದಿ ಸಾವು: ದೇಶದಲ್ಲಿ ಕರ್ನಾಟಕದಲ್ಲೇ ಅತಿ ಹೆಚ್ಚು!

**ಶಿವಮೊಗ್ಗ/ ನವದೆಹಲಿ,ಏ.2-** 2024 ಮತ್ತು 2025 ಎರಡರಲ್ಲೂ ಕರ್ನಾಟಕದಲ್ಲಿ ಹಾವು ಕಡಿತದಿಂದ ಅತಿ ಹೆಚ್ಚು ಮಂದಿ ಸಾವನಪ್ಪಿದ್ದಾರೆ. ದೇಶದಲ್ಲಿಯೇ ಅತಿ ಹೆಚ್ಚಿನ ಮಂದಿ ಕರ್ನಾಟಕದಲ್ಲಿ ಮೃತಪಟ್ಟಿರುವುದಾಗಿ ವರದಿಯಾಗಿದೆ.

ಸಮಗ್ರ ರೋಗ ಕಣ್ಗಾವಲು ಕಾರ್ಯಕ್ರಮದ ಅಡಿಯಲ್ಲಿ 2023 ರಲ್ಲಿ 183ಗಳಿದ್ದ ಹಾವು ಕಡಿತ ಪ್ರಕರಣಗಳು 2024ರಲ್ಲಿ 370ಕ್ಕೆ, 2025ರಲ್ಲಿ 431ಕ್ಕೆ ಏರುವುದರೊಂದಿಗೆ ಎರಡು ವರ್ಷಗಳಲ್ಲಿ ದುಪ್ಪಟ್ಟು ಹೆಚ್ಚಾಗಿದೆ. ಹಳ್ಳಿಗಳಲ್ಲಿ ಸಂಭವಿಸುವ ಅನೇಕ ಹಾವು ಕಡಿತದ ಸಾವುಗಳು ಸಂಪೂರ್ಣವಾಗಿ ವರದಿಯಾಗಿಲ್ಲ. ಏಕೆಂದರೆ ಸಂತ್ರಸ್ತರು ಆಸ್ಪತ್ರೆಗೆ ತಲುಪುವಷ್ಟರಲ್ಲಿಯೇ ಸಾವನ್ನಪ್ಪಿರುತ್ತಾರೆ.

ಲೋಕಸಭೆಯಲ್ಲಿ ನಡೆಯುತ್ತಿರುವ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್, ಹಾವು ಕಡಿತವನ್ನು ಆಯಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಡಿ ಅಧಿಸೂಚಿತ ಕಾಯಿಲೆ ಎಂದು ಸಚಿವಾಲಯವು ಸೂಚನೆ ನೀಡಿದೆ ಎಂದು ಹೇಳಿದರು.

ಸಮಗ್ರ ಆರೋಗ್ಯ ಮಾಹಿತಿ ಪೋರ್ಟಲ್ ಮೂಲಕ ಸಮಗ್ರ ರೋಗ ಕಣ್ಗಾವಲು ಕಾರ್ಯಕ್ರಮದಿಂದ ಪಡೆದ ಅಂಕಿಅಂಶಗಳ ಪ್ರಕಾರ, ಕರ್ನಾಟಕದಲ್ಲಿ 2023 ರಲ್ಲಿ ಹಾವು ಕಡಿತದಿಂದ 19 ಮಂದಿ ಸಾವನ್ನಪ್ಪಿದ್ದರೆ, 2024 ರಲ್ಲಿ 101 ಮತ್ತು 2025 ರಲ್ಲಿ 157 ಮಂದಿ ಸಾವನ್ನಪ್ಪಿದ್ದಾರೆ. ಇದರೊಂದಿಗೆ ಮೂರು ವರ್ಷಗಳಲ್ಲಿ ಮೃತಪಟ್ಟವರ ಸಂಖ್ಯೆ 277ಕ್ಕೆ ಏರಿಕೆಯಾಗಿದೆ. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗಿಂತ ಅತ್ಯಂತ ಹೆಚ್ಚಿನ ಮಂದಿ ಕರ್ನಾಟಕದಲ್ಲಿ ಸಾವನ್ನಪ್ಪಿರುವುದಾಗಿ ವರದಿಯಲ್ಲಿ ಹೇಳಲಾಗಿದೆ.

ಇದೇ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ 153 ಮಂದಿ ಸಾವನ್ನಪ್ಪಿರುವುದರೊಂದಿಗೆ ಎರಡನೇ ಸ್ಥಾನದಲ್ಲಿದೆ. ತಮಿಳುನಾಡಿನಲ್ಲಿ 2023ರಲ್ಲಿ 43 ಮಂದಿ, 2024ರಲ್ಲಿ 25, 2025ರಲ್ಲಿ 27 ಮಂದಿ ಮೃತಪಟ್ಟಿದ್ದಾರೆ. ಕರ್ನಾಟಕದ 2023 ರಿಂದ 2025 ರವರೆಗೆ ಮೃತಪಟ್ಟವರ ಸಂಖ್ಯೆಯಲ್ಲಿ ಸುಮಾರು ಮೂರು ಪಟ್ಟು ಹೆಚ್ಚಾಗಿದೆ .

ಅರಣ್ಯ ಪ್ರದೇಶ ಮತ್ತು ವಿಷಕಾರಿ ಪ್ರಭೇದಗಳ ಸಾಂದ್ರತೆ ಎರಡೂ ಗಣನೀಯವಾಗಿರುವ ಕರ್ನಾಟಕದಲ್ಲಿ ಅತಿ ಹೆಚ್ಚು ಮಂದಿ ಹಾವು ಕಡಿತದಿಂದ ಸಾವನ್ನಪ್ಪಿರುವುದು ಹೆಚ್ಚಿನ ಕಳವಳಕ್ಕೆ ಕಾರಣವಾಗಿದೆ. ಆವಾಸಸ್ಥಾನದ ವಿಘಟನೆ ಮತ್ತು ಕುಗ್ಗುತ್ತಿರುವ ಅರಣ್ಯ ಬಫರ್‌ಗಳು ಶೇಷವಾಗಿ ಪಶ್ಚಿಮ ಘಟ್ಟಗಳ ಗಡಿಯಲ್ಲಿರುವ ಜಿಲ್ಲೆಗಳು ಮತ್ತು ಮಲೆನಾಡು ಪ್ರದೇಶದಲ್ಲಿ ಹಾವು ಕಡಿತ ಪ್ರಕರಣ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಪರಿಸರ ಸಂರಕ್ಷರು ಹೇಳುತ್ತಾರೆ.

## ಜನಗಣತಿ ಕಾರ್ಯಕ್ಕೆ 1 ಲಕ್ಷ ಶಿಕ್ಷಕರ ನಿಯೋಜನೆ-ತೀವ್ರ ವಿರೋಧ



**ಬೆಂಗಳೂರು,ಏ.2-**ಜನಗಣತಿ ಕಾರ್ಯಕ್ಕೆ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ 1 ಲಕ್ಷಕ್ಕೂ ಹೆಚ್ಚು ಸರ್ಕಾರಿ ಶಿಕ್ಷಕರನ್ನು ನೇಮಕ ಮಾಡಲಾಗಿದ್ದು, ಸರ್ಕಾರ ಈ ಕ್ರಮದ ವಿರುದ್ಧ ಆಕ್ರೋಶಗಳು ವ್ಯಕ್ತವಾಗುತ್ತಿವೆ.

ಜನಗಣತಿ ಕಾರ್ಯ ಏಪ್ರಿಲ್ 16ರಿಂದ ಆರಂಭವಾಗಲಿದ್ದು, ಸ್ವಮೌಲ್ಯಮಾಪನ ಪ್ರಕ್ರಿಯೆ ಏಪ್ರಿಲ್ 1ರಿಂದ 15ರವರೆಗೆ ನಡೆಯಲಿದೆ. ಈ ನಡುವೆ ಜನಗಣತಿ ಕಾರ್ಯಕ್ಕೆ ಶಿಕ್ಷಕರ ನೇಮಕ ಕುರಿದು ಅಸಮಾಧಾನಗಳು ವ್ಯಕ್ತವಾಗುತ್ತಿವೆ.

**SSLC** ಪರೀಕ್ಷಾ ಜವಾಬ್ದಾರಿ, ಪಠ್ಯಕ್ರಮ ಪೂರ್ಣಗೊ ಳಿಸುವುದು ಮತ್ತು ಈಗ ಜನಗಣತಿ ಕಾರ್ಯ ಎಲ್ಲವೂ ಒಟ್ಟಿಗೆ ನಡೆಸಬೇಕಾಗಿದೆ. ಬೇಸಿಗೆ ಹೆಚ್ಚಾಗಿದ್ದು, ಬೆಳಿಗ್ಗೆ 6.30ರಿಂದ 11.30ರವರೆಗೆ ಮತ್ತು ಸಂಜೆ 4.30ರಿಂದ 8.30ರವರೆಗೆ ಕಾರ್ಯ ನಿರ್ವಹಿಸುವುದು ತುಂಬಾ ಕಷ್ಟಕರವಾಗಿದೆ. ಕೆಲವು ಶಿಕ್ಷಕರು ಈ ಯೋಜನೆಯಿಂದ ಉಂಟಾಗುವ ಒತ್ತಡ ಮತ್ತು ಆರೋಗ್ಯ ಸಮಸ್ಯೆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ,

ಇದು ಹೊಸದು ಅಲ್ಲ. 2025ರಲ್ಲಿ ಶಿಕ್ಷಕರು ಸಾಮಾಜಿಕ ಮತ್ತು ಶಿಕ್ಷಣ ಸರ್ವೆನಲ್ಲಿ ಭಾಗವಹಿಸಿದ್ದರು. ಆ ಸಮಯದಲ್ಲಿ ದಸರಾ ರಜೆ ವಿಸ್ತರಿಸಲಾಯಿತು, ಆದರೆ, ನಂತರ ಪಠ್ಯಕ್ರಮ ಪೂರ್ಣಗೊಳಿಸುವ ಒತ್ತಡ ಹೆಚ್ಚಾಯಿತು. ಚಿಕ್ಕಬಳ್ಳಾಪುರ ಸರ್ಕಾರಿ ಪ್ರೌಢಶಾಲೆಯ ಪ್ರೌಢಶಾಲಾ ಶಿಕ್ಷಕರೊಬ್ಬರು ಮಾತನಾಡಿ, ನಾನು ಪ್ರಸ್ತುತ ಖಖಔಇ ಪರೀಕ್ಷೆಯ ಕರ್ತವ್ಯದಲ್ಲಿದ್ದೇನೆ. ಏಪ್ರಿಲ್ 2 ಕೊನೆಯ ಪರೀಕ್ಷೆಯಾಗಿದೆ. ಏಪ್ರಿಲ್ 7 ರಿಂದ 12 ರವರೆಗೆ, ನಾವು ಪರೀಕ್ಷೆ -1 ರ ಉತ್ತರ ಪತ್ರಿಕೆಗಳ ಮೌಲ್ಯಮಾಪನವನ್ನು ಮುಗಿಸಬೇಕಾಗಿದೆ. ಏಪ್ರಿಲ್ 16 ರಿಂದ ಜನಗಣತಿ ಕಾರ್ಯದಲ್ಲಿ ತೊಡಗಬೇಕಿದೆ.

ಬಿರು ಬಿಸಿಲಿನಲ್ಲಿ ನಾವು ಬೆಳಿಗ್ಗೆ 6.30 ರಿಂದ ಬೆಳಿಗ್ಗೆ 11.30 ರವರೆಗೆ ಈ ಕೆಲಸವನ್ನು ಮಾಡಬೇಕಾಗಿದೆ ಮತ್ತು ಸಂಜೆ 4.30 ರಿಂದ ರಾತ್ರಿ 8.30 ರವರೆಗೆ ಮತ್ತೆ ಪುನರಾರಂಭಿಸಬೇಕಾಗಿದೆ. ಮತ್ತೆ, ನಾವು ಮೇ 2026 ರ ಮೊದಲ ವಾರದಿಂದ ಖಖಔಇ ಪರೀಕ್ಷೆ -1 ರ ಪರೀಕ್ಷಾ ಕರ್ತವ್ಯವನ್ನು ಪುನರಾರಂಭಿಸಬೇಕಾಗಿದೆ. ಸರ್ಕಾರ ಕನಿಷ್ಠ ಪಕ್ಷ ನಮ್ಮಂತಹ ಖಖಔಇ ಪರೀಕ್ಷಾ ಮೌಲ್ಯಮಾಪಕರಿಗೆ ವಿನಾಯಿತಿ ನೀಡಬೇಕು. ವರ್ಷವಿಡೀ ಅದನ್ನು ನಿರ್ವಹಿಸುವುದು ಕಷ್ಟ ಎಂದು ಹೇಳಿದ್ದಾರೆ.ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ (ಕೆಪಿಎಸ್‌ಟಿಎ) ಅಧ್ಯಕ್ಷ ಚಂದ್ರಶೇಖರ್ ನುಗ್ಗಲಿ ಅವರು ಮಾತನಾಡಿ, 50 ವರ್ಷಕ್ಕಿಂತ ಮೇಲ್ಪಟ್ಟ ಶಿಕ್ಷಕರಿಗೆ ಕರ್ತವ್ಯದಿಂದ ವಿನಾಯಿತಿ ನೀಡುವಂತೆ ಕಂದಾಯ ಇಲಾಖೆಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದ್ದಾರೆ. ಇತರ ರಾಜ್ಯಗಳಲ್ಲಿ ಎಸ್ಐಆರ್ ಪ್ರಕ್ರಿಯೆಯ ಸಮಯದಲ್ಲಿ ಶಾಲಾ ಶಿಕ್ಷಕರು ಕರ್ತವ್ಯದ ಸಮಯದಲ್ಲಿ ಸಾವನ್ನಪ್ಪಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಆದಾಗ್ಯೂ, ಕಂದಾಯ ಇಲಾಖೆ ನಮ್ಮ ವಿನಂತಿಯನ್ನು ತಿರಸ್ಕರಿಸಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಕರ್ತವ್ಯದಲ್ಲಿರುವ ಶಿಕ್ಷಕರನ್ನು ಜನಗಣತಿ ಕೆಲಸದಿಂದ ವಿನಾಯಿತಿ ನೀಡುವಂತೆ ನಾವು ಶಾಲಾ ಶಿಕ್ಷಣ ಇಲಾಖೆಯನ್ನು ಕೋರಿದ್ದೆವು, ಆದರೆ, ಅದನ್ನು ತಿರಸ್ಕರಿಸಲಾಗಿದೆ.

ಒಂದು ಸಂಘವಾಗಿ, ನಾವು ವಿವಿಧ ಸಚಿವರೊಂದಿಗೆ ಮಾತನಾಡಲು ಪ್ರಯತ್ನಿಸಿದ್ದೇವೆ. ಆದರೆ, ಇಲ್ಲಿಯವರೆಗೆ ಶಿಕ್ಷಕರ ಪರವಾಗಿ ಯಾವ ನಿರ್ಧಾರವನ್ನೂ ಸರ್ಕಾರ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ.ಕನ್ನಡ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಹೇಳಿದ್ದಾರೆ, 50 ವರ್ಷ ಮೇಲಿದೆ ಶಿಕ್ಷಕರಿಗೆ, ಆರೋಗ್ಯ ಸಮಸ್ಯೆ ಇರುವವರಿಗೆ ಮತ್ತು ಹೆಚ್ಚುವರಿ ಉಷ್ಣತೆಯಲ್ಲಿರುವವರಿಗೆ ಜನಸಂಖ್ಯಾ ಕಾರ್ಯದಲ್ಲಿ ವಿನಾಯಿತಿ ನೀಡಬೇಕು. ಇತರ ರಾಜ್ಯಗಳಲ್ಲಿ ಈ ರೀತಿಯ ತೀವ್ರ ಕಾರ್ಯದ ವೇಳೆ ಶಿಕ್ಷಕರ ಸಾವಿನ ಘಟನೆಗಳಿದ್ದಿವೆ. **SSLC** ಪರೀಕ್ಷಾ ಜವಾಬ್ದಾರಿಯಲ್ಲಿರುವ ಶಿಕ್ಷಕರಿಗೆ ಸಹ ವಿನಾಯಿತಿ ನೀಡಬೇಕು ಎಂದು ಮನವಿ ಮಾಡಿದ್ದರೂ, ರೆವೆನ್ಯೂ ಇಲಾಖೆ ಮತ್ತು ಶಾಲಾ ಶಿಕ್ಷಣ ಇಲಾಖೆ ನಿರಾಕರಿಸಿದೆ.

ಸಚಿವ ಮಧು ಬಂಗಾರಪ್ಪ ಅವರು ಪ್ರತಿಕ್ರಿಯೆ ನೀಡಿ, ಜನಗಣತಿ ಕಾರ್ಯ ಅತ್ಯಂತ ಮಹತ್ವದ ಕೆಲಸವಾಗಿದೆ. ಮಾಹಿತಿ ಸಂಗ್ರಹಕ್ಕಾಗಿ ನಾವು ಶಿಕ್ಷಕರನ್ನು ಮಾತ್ರ ನಿಯೋಜಿಸಬೇಕಾಗಿದೆ. ಹೊರಗಿನ ಏಜೆನ್ಸಿಗಳನ್ನು ಬಳಸಲು ಸಾಧ್ಯವಿಲ್ಲ. ನಮಗೂ ಸಮಸ್ಯೆ ಅರ್ಥವಾಗುತ್ತದೆ.

ಆದರೆ ಮುಖ್ಯ ಕೆಲಸಕ್ಕಾಗಿ ನಿಯೋಜನೆ ತಪ್ಪಿಸಲಾಗುವುದಿಲ್ಲ ಎಂದು ಹೇಳಿದ್ದಾರೆ. ಶಿಕ್ಷಣವನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸಗಳಲ್ಲಿ ಶಿಕ್ಷಕರನ್ನು ಒಳಗೊಳ್ಳದಂತೆ ಹೊಸ ಕಾಯ್ದೆ ತರುವ ಬಗ್ಗೆ ಚರ್ಚೆ ನಡೆಯುತ್ತಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿ, ಈ ಕುರಿತು ಯಾವುದೇ ಚರ್ಚೆ ನಡೆಯುತ್ತಿಲ್ಲ. ಸರ್ಕಾರದ ದೃಷ್ಟಿಕೋನದ ಪ್ರಕಾರ, ಜನಗಣತಿ ಕಾರ್ಯ ಅತ್ಯಂತ ಮುಖ್ಯವೆಂದು ಪರಿಗಣಿಸಿ, ಶಿಕ್ಷಕರನ್ನು ನಿಯೋಜಿಸುವುದು ಅನಿವಾರ್ಯವಾಗಿದೆ ಎಂದು ತಿಳಿಸಿದ್ದಾರೆ.

## ಬೆಂಗಳೂರು ನಗರ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವ ಹಿಂದಿನ ವಸ್ತ್ರಸಂಹಿತೆಯನ್ನೇ ಮುಂದುವರಿಸಲು ನಿರ್ಧಾರ..!



**ಬೆಂಗಳೂರು,ಏ.2-**ಡಾ. ಮನ್ಮೋಹನ್ ಸಿಂಗ್ ಬೆಂಗಳೂರು ಸಿಟಿ ವಿಶ್ವವಿದ್ಯಾಲಯವು ಏಪ್ರಿಲ್ 4ರಂದು ತನ್ನ ಐದನೇ ವಾರ್ಷಿಕ ಘಟಿಕೋತ್ಸವವನ್ನು ಆಯೋಜಿಸುತ್ತಿದ್ದು, ಈ ವರ್ಷವೂ ವಿದ್ಯಾರ್ಥಿಗಳು, ಕುಲಪತಿ, ಉನ್ನತ ಶಿಕ್ಷಣ ಸಚಿವರು, ಸಿಂಡಿಕೇಟ್ ಸದಸ್ಯರು ಮತ್ತು ಆಡಳಿತ ಸಿಬ್ಬಂದಿಗೆ ಹಿಂದಿನ ವಸ್ತ್ರ ಸಂಹಿತೆಯನ್ನೇ ಅನಸುರಿಸುವಂತೆ ಸೂಚನೆ ನೀಡಿದೆ ಎಂದು ತಿಳಿದುಬಂದಿದೆ.

ಬಿಸಿಯು ಉಪಕುಲಪತಿ ರಮೇಶ್ ಬಿ ಈ ಕುರಿತು ಮಾಹಿತಿ ನೀಡಿದ್ದು, ಭಾರತೀಯ ಸಂಪ್ರದಾಯಗಳಿಗೆ ಅನುಗುಣವಾಗಿ ಖಾದಿ ಆಧಾರಿತ ಉಡುಗೆ ಪರಿಚಯಿಸುವ ಪ್ರಸ್ತಾವ ಇನ್ನೂ ಸರ್ಕಾರದ ಅನುಮೋದನೆಗಾಗಿ ಕಾಯುತ್ತಿದೆ ಎಂದು ತಿಳಿಸಿದ್ದಾರೆ.

ಹಿಂದಿನ ಸಭೆಯಲ್ಲಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಖಾದಿ ಡ್ರೆಸ್ ಕೋಡ್ ಪರಿಚಯಿಸುವ ನಿರ್ಣಯವನ್ನು ಕೈಗೊಳ್ಳಲಾಗಿತ್ತು, ಆದರೆ, ಕುಲಪತಿಗಳು ಎಲ್ಲಾ ವಿಶ್ವವಿದ್ಯಾಲಯಗಳ ಚಾನ್ಸಲರ್ ಆಗಿರುವ ಕಾರಣ ಅಧಿಕೃತ ಆದೇಶ ಇನ್ನೂ ಹೊರ ಬಂದಿಲ್ಲ. ಹೀಗಾಗಿ ಈ ವರ್ಷ, ಕಳೆದ ವರ್ಷವಿದ್ದ ವಸ್ತ್ರಸಂಹಿತೆಯನ್ನೇ ಮಂದು ವರೆಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ಯುವತಿಯರು ಶ್ವೇತ ಬಟ್ಟೆ, ಸಾರಿ ಅಥವಾ ಚೂರಿದಾರ್ ಧರಿಸುವುದು, ಯುವಕರು ಕುರ್ತಾ, ಶರ್ಟ್ ಮತ್ತು ಟ್ರೌಸರ್ಸ್ ಧರಿಸಬೇಕು ಎಂದು ತಿಳಿಸಿದ್ದಾರೆ.

ಹಿಂದಿನ ತಿಂಗಳ ಉಪ ಕುಲಪತಿಗಳ ಸಭೆಯಲ್ಲಿ ಚರ್ಚೆಯ ನಂತರ ಸಮಿತಿ ನಿರ್ಮಿಸಿ ಶಿಫಾರಸು ಸಲ್ಲಿಸಲು ಸೂಚನೆ ನೀಡಲಾಗಿತ್ತು. ಮಹಿಳೆಯರಿಗೆ ಸಾರಿ, ಪುರುಷರಿಗೆ ಕುರ್ತಾಪೈಜಾಮಾ ಪರಿಚಯಿಸುವ ಯೋಜನೆಗಳಿವೆ. ಆದರೆ, ಸಮಿತಿ ಇನ್ನೂ ವರ ದಿಯನ್ನು ಮಂಡಿಸಿಲ್ಲ.

ಇತ್ತೀಚೆಗೆ ವಿಶ್ವವಿದ್ಯಾಲಯ ಅನುದಾನ ಆಯೋಗವು ದೇಶದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಘಟಿಕೋತ್ಸವಗಳಲ್ಲಿ ಕೈಯಿಂದ ನೇಯ್ದ ಬಟ್ಟೆಗಳ (ಹ್ಯಾಂಡ್ ವೋವನ್) ಉಪಯೋಗಿಸುವಂತೆ ನಿರ್ದೇಶನ ನೀಡಿತ್ತು.ಮುಂದಿನ ವರ್ಷದಿಂದ ಬ್ರಿಟಿಷ್ ಶೈಲಿಯ ಗೌನಗಳು, ರೋಬ್ ಮತ್ತು ಕ್ಯಾಪ್‌ಗಳನ್ನು ಭಾರತೀಯ ಪರಂಪರೆ ಯನ್ನು ಪ್ರತಿಬಿಂಬಿಸುವ ಉಡುಗೆ ಶೈಲಿ ಯಂತೆ ಬದಲಿಸಲಾಗುವುದು. ಕೆಲ ವಿಶ್ವವಿದ್ಯಾಲಯಗಳು ಈಗಾಗಲೇ ಈ ನಿಟ್ಟಿನಲ್ಲಿ ಕ್ರಮ ಕೈಗೊಂಡಿವೆ ಎಂದು ರಮೇಶ್ ಅವರು ತಿಳಿಸಿದ್ದಾರೆ. ಕಳೆದ ವರ್ಷ, 32,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ನಾತಕ ಪದವಿ ಪಡೆದಿದ್ದರು ಮತ್ತು 7,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿಗಳನ್ನು ಪಡೆದಿದ್ದರು. ಈ ವರ್ಷವೂ ಅದೇ ರೀತಿಯ ಪ್ರವೃತ್ತಿಯನ್ನು ನಿರೀಕ್ಷಿಸಲಾಗಿದೆ.

## ಟ್ರಂಪ್ ಭಾಷಣದ ಬೆನ್ನಲ್ಲೇ ಇಸ್ರೇಲ್, ಗಲ್ಫ್ ದೇಶಗಳ ಮೇಲೆ ಮತ್ತೆ ಕ್ಷಿಪಣಿ ದಾಳಿ ನಡೆಸಿದ ಇರಾನ್

**ದುಬೈ (ಯುಎಇ),ಏ.2-**ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾಷಣದ ಬೆನ್ನಲ್ಲೇ ಇರಾನ್, ಇಸ್ರೇಲ್ ಮತ್ತು ಗಲ್ಫ್ ದೇಶಗಳ ಮೇಲೆ ಹೊಸ ಕ್ಷಿಪಣಿ ದಾಳಿ ಮೂಲಕ ಪ್ರತಿಕ್ರಿಯಿಸಿದೆ. ವಾಷಿಂಗ್ಟನ್‌ನ ಕದನ ವಿರಾಮನವನ್ನು ಟೆಹ್ರಾನ್ ತಿರಸ್ಕರಿಸಿದೆ. ಜೊತೆಗೆ ಹಾರ್ಮುಜ್ ಜಲಸಂಧಿಯ ಮೇಲೆ ಹಿಡಿತವನ್ನು ಮುಂದುವರೆಸಿದ್ದಾಗಿ ತಿಳಿಸಿದೆ.

ಟ್ರಂಪ್ ಅವರು ಮುಂದಿನ ಎರಡು ಮೂರು ವಾರಗಳಲ್ಲಿ ಅಮೆರಿಕವು ಇರಾನ್ ಮೇಲೆ ಕಠಿಣ ದಾಳಿ ನಡೆಸುವುದಾಗಿ ಭಾಷಣ ಪ್ರಾರಂಭಿಸುವ ಸ್ವಲ್ಪ ಮೊದಲು, ದುಬೈನಲ್ಲಿ ಸ್ಫೋಟಗಳ ಶಬ್ದ ಕೇಳಿಬಂದವು. ಅಧ್ಯಕ್ಷರು ಭಾಷಣ ಮಾಡಿದ ಬೆನ್ನಲ್ಲೇ ಇಸ್ರೇಲ್ ತನ್ನ ಮಿಲಿಟರಿ ಒಳಬರುವ ಕ್ಷಿಪಣಿಗಳನ್ನು ತಡೆಯಲು ಮುಂದಾಯಿತು. ಜೊತೆಗೆ ಬಹ್ರೇನ್‌ನಲ್ಲಿರುವ ಅಮೆರಿಕ 5ನೇ ನೌಕಾಪಡೆಯ ನೆಲೆಯಲ್ಲಿ ಸೈರನ್‌ಗಳು ಮೊಳಗಿದವು.

ಜಲಸಂಧಿಯನ್ನು ಮುಕ್ತವಾಗಿಸುವಂತೆ ವಾಷಿಂಗ್ಟನ್ ಒತ್ತಾಯಿಸಿದರೂ, ಟ್ರಂಪ್ ಇದು ಅಮೆರಿಕ ಪಡೆಗಳ ನಿಯಂತ್ರಣದಲ್ಲಿಲ್ಲ. ಈ ಮಾರ್ಗದ ಮೂಲಕ ತೈಲ ಪಡೆಯುತ್ತಿರುವ ದೇಶಗಳು ಮುಂದಾಗಿರುವ ಈ ಕುರಿತು ಮಾತನಾಡಬೇಕು ಎಂದಿದ್ದರು.

ಹಾರ್ಮುಜ್ ಜಲಸಂಧಿಯಲ್ಲಿ ತೈಲ ಹಡುಗುಗಳ ಸಂಚಾರ ಮುಕ್ತವಾಗಿಸಿ, ಮಾರ್ಗವನ್ನು ತೆರೆಯುವ ಕುರಿತು ಬ್ರಿಟನ್ ಸುಮಾರು 35ಕ್ಕೂ ಹೆಚ್ಚು ದೇಶಗಳೊಂದಿಗೆ ಮಾತುಕತೆ ನಡೆಸಲು ಯೋಜಿಸಿದೆ. ಅಮೆರಿಕ ಹೊರತುಪಡಿಸಿ 35 ದೇಶಗಳು ಹಾಗೂ ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ಬಹ್ರೇನ್, ಇರಾನ್ ಜಲಸಂಧಿಯನ್ನು ನಿರ್ಬಂಧಿಸುವುದನ್ನು ನಿಲ್ಲಿಸುವಂತೆ ಒತ್ತಾಯಿಸುವ ಘೋಷಣೆಗೆ ಸಹಿ ಹಾಕಿದವು. ಯುದ್ಧ ಅಂತ್ಯಗೊಂಡ ಬಳಿಕ ರಾಜತಾಂತ್ರಿಕ ಮತ್ತು ರಾಜಕೀಯ ಕ್ರಮದ ಮೂಲಕ ಹಡಗು ಸಂಚಾರವನ್ನು ಪುರ್ನ ಸ್ಥಾಪನೆ ಕುರಿತು ಚರ್ಚಿಸಲಾಯಿತು.ಇದೀಗ ಸಹಿ ಹಾಕಿದ 35 ದೇಶಗಳು, ಡ್ರೋನ್ ಮತ್ತು ಕ್ಷಿಪಣಿ ದಾಳಿಗಳ ಬೆದರಿಕೆ ಮತ್ತು ಜಲಸಂಧಿಯನ್ನು ನಿರ್ಬಂಧಿಸುವ ಇತರ ಪ್ರಯತ್ನಗಳನ್ನು ತಕ್ಷಣ ನಿಲ್ಲಿಸುವಂತೆ ಕರೆ ನೀಡಿದೆ. ಈ ವೇಳೆ ಮಾತನಾಡಿರುವ ಬ್ರಿಟಿಷ್ ಪ್ರಧಾನಿ ಕೀರ್ ಸ್ಟಾರ್ಮರ್, ಜಲಸಂಧಿಯಲ್ಲಿ ಸಂಚಾರ ಸ್ವಾತಂತ್ರ್ಯವನ್ನು ಪುನಃಸ್ಥಾಪಿಸಲು, ಸಿಕ್ಕಿಬಿದ್ದ ಹಡಗುಗಳು ಮತ್ತು ನಾವಿಕರ ಸುರಕ್ಷತೆಯನ್ನು ಖಾತರಿಪಡಿಸಲು ಮತ್ತು ಪ್ರಮುಖ ಸರಕುಗಳ ಚಲನೆಯನ್ನು ಪುನರಾರಂಭಿಸಲು ತೆಗೆದುಕೊಳ್ಳಬಹುದಾದ ಎಲ್ಲ ಕಾರ್ಯಸಾಧ್ಯವಾದ ರಾಜತಾಂತ್ರಿಕ ಮತ್ತು ರಾಜಕೀಯ ಕ್ರಮಗಳನ್ನು ಈ ಗುಂಪು ನಿರ್ಣಯಿಸುತ್ತದೆ ಎಂದಿದ್ದಾರೆ.

# ಬಾಬೂಜಿ-ಅಂಬೇಡ್ಕರ್ ಜಯಂತಿ ಅದ್ದೂರಿಯಾಗಿ ಆಚರಣೆ : ಅಶೋಕ ಪವಾರ್

ಕನ್ನಡ ಮಾತೃ ಭೂಮಿ ವಾರ್ತೆ



**ಸಿರವಾರ,ಏ.2-** ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್ ರಾಂ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರ ಜಯಂತಿಗಳನ್ನು ಈ ಬಾರಿಯೂ ಕೂಡ ತಾಲೂಕ ಆಡಳಿತದ ವತಿಯಿಂದ ವಿಜೃಂಭಣೆಯಿಂದ ಆಚರಣೆ ಮಾಡಲು ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ತಹಸೀಲ್ದಾರ್ ಅಶೋಕ ಪವಾರ್ ರವರು ತಾಲೂಕ ಮಟ್ಟದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ತಹಸೀಲ್ದಾರ ಕಾರ್ಯಾಲಯದ ಸಭಾಂಗಣದಲ್ಲಿ ಡಾ.ಬಾಬು ಜಗಜೀವನ್ ರಾಂ ಹಾಗೂ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ರವರ ಜಯಂತಿಗಳ ಆಚರಣೆಯ ಅಂಗವಾಗಿ ಬುಧವಾರ ಕರೆದಿದ್ದ ತಾಲೂಕ ಮಟ್ಟದ ಅಧಿಕಾರಿಗಳು ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರುಗಳ ಪೂರ್ವ ಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ತಾಲೂಕ ಆಡಳಿತದ ವತಿಯಿಂದ ಏ.14 ರಂದು ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ್ ರಾಂ ರವರ ಜಯಂತಿಗಳನ್ನು ಜಂಟಿಯಾಗಿ ಆಚರಣೆ ಮಾಡಲು ನಿರ್ಧಾರ ಮಾಡಲಾಗಿದ್ದು, ಅಂದು ಬೆಳಿಗ್ಗೆ 09 ಗಂಟೆಗೆ ಪಟ್ಟಣದ ಬಸವೇಶ್ವರ ವೃತ್ತದಿಂದ ಬಸ್ ನಿಲ್ದಾಣದ ವರೆಗೆ ಬೃಹತ್ ಮೆರವಣಿಗೆ ಮೂಲಕ ಆಗಮಿಸಿ ನಂತರ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದರು.

ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಡಾ.ಬಾಬು ಜಗಜೀವನ್ ರಾಂ ರವರ ಜಯಂತಿ ಆಚರಣೆಯ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ, ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮಕ್ಕೆ ಬರುವ ಎಲ್ಲರಿಗೂ ಊಟದ ವ್ಯವಸ್ಥೆಯೂ ಇರಲಿದೆ ಎಂದು ತಿಳಿಸಿದರು.

ಇದೇ ಏ.05 ರಂದು ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ್ ರಾಂ ರವರ ಜಯಂತಿಯನ್ನು ಮತ್ತು ಏ.14 ರಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ ಜಯಂತಿಯನ್ನು ತಾಲೂಕಿನ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಮತ್ತು ಶಾಲಾ-ಕಾಲೇಜುಗಳಲ್ಲಿ ಕಡ್ಡಾಯವಾಗಿ ಬೆಳಿಗ್ಗೆ 09 ಗಂಟೆಯ ಒಳಗೆ ಆಚರಣೆ ಮಾಡುವಂತೆ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇದೇ ವೇಳೆ ಸಿರವಾರ ಪಟ್ಟಣದಲ್ಲಿ ಡಾ.ಬಾಬು ಜಗಜೀವನ್ ರಾಂ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ರವರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲು ತಾಲೂಕ ಆಡಳಿತದಿಂದ ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ಪ್ರತಿ ತಿಂಗಳಿಗೊಮ್ಮೆ ಎಸ್ಸಿ-ಎಸ್ಟಿ ಸಮುದಾಯಗಳ ಕುಂದು ಕೊರತೆಯ ಸಭೆಯನ್ನು ನಡೆಸಬೇಕು ಎಂದು ಸಂಘ-ಸಂಸ್ಥೆಗಳ ಮುಖಂಡರು ತಹಸೀಲ್ದಾರರಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪ.ಪಂ.ಅಧ್ಯಕ್ಷ ಹಾಜಿ ಚೌದ್ರಿ, ತಾ.ಪಂ. ಇಒ ಶಶಿಧರ್ ಸ್ವಾಮಿ, ಪ.ಪಂ. ಮುಖ್ಯಾಧಿಕಾರಿ ಸುರೇಶ ಶೆಟ್ಟಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಸಹಾರ ಬಾನು, ಉಪ ಖಜಾನಾಧಿಕಾರಿ ಶಂಕ್ರಮ್ಮ, ನೀರಾವರಿ ಇಲಾಖೆ ಎಇಇ ವಿಜಯಲಕ್ಷ್ಮಿ ಪಾಟೀಲ್,ಸಿಡಿಪಿಒ ಇಲಾಖೆಯ ರೇಣುಕಾ, ಆರೋಗ್ಯ ಇಲಾಖೆಯ ಶ್ರೀದೇವಿ, ಶಿಕ್ಷಕ ಮಹೇಶ್ ಸಿರವಾರ, ಜೆಸ್ಕಾಂ ಇಲಾಖೆಯ ಮೋಹನ್ ಸಿಂಗ್, ಪಶು ಇಲಾಖೆಯ ವೆಂಕಟೇಶ್ ಕುಮಾರ್ ಹಾಗೂ ವಿವಿಧ ಸಂಘ-ಸಂಸ್ಥೆಗಳ ಮುಖಂಡರಾದ ಎಂ. ಬಸವರಾಜ ಭಂಡಾರಿ, ಲಂಕೇಶ್ ಮರಾಟ, ಅಬ್ರಹಾಂ ಹೊನ್ನಟಗಿ, ಮನೋಹರ ಸಿರವಾರ, ಚನ್ನಪ್ಪ ಬೂದಿನಾಳ, ಡಿ.ಎಚ್. ಭೀಮಣ್ಣ, ಮೌನೇಶ್ ಪಿತಗಲ್, ಎಂ. ಡೇವಿಡ್, ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿಗಳು ಮತ್ತಿತರರು ಇದ್ದರು.

# ಬಾಗಲಕೋಟೆ: ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ಗೆಲುವು ಖಚಿತ

ಕನ್ನಡ ಮಾತೃ ಭೂಮಿ ವಾರ್ತೆ



**ರಾಯಚೂರು,ಏ.2-** ಬಾಗಲಕೋಟ ಪಟ್ಟಣಕ್ಕೆ ಉಪಚು ನಾವಣೆ ಪ್ರಯುಕ್ತ ಭೇಟಿ ನೀಡಿದ ಉಪಮುಖ್ಯಮಂತ್ರಿಗಳಾದ ಡಿ.ಕೆ ಶಿವಕುಮಾರ್ ಅವರನ್ನು ಹೆಲಿಪ್ಯಾಡ್‌ನಲ್ಲಿ ಆತ್ಮೀಯವಾಗಿ ಬರಮಾಡಿಕೊಂಡ ವಿಧಾನಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ್ ಬಯ್ಯಾಪುರ, ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ನಿಮಿತ್ತ ಈ ದಿನ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮದಲ್ಲಿ ಹಾಗೂ ಪಟ್ಟಣದಲ್ಲಿ ಜರುಗಿದ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡು ಪಕ್ಷದ ಅಭ್ಯರ್ಥಿ ಉಮೇಶ್ ಮೇಟಿ ಅವರ ಪರವಾಗಿ ಶರಣಗೌಡ ಪಾಟೀಲ್ ಬಯ್ಯಾಪುರ ರವರು ಮತಯಾಚಿಸಿದರು.

ಸಾರ್ವಜನಿಕರ ಸ್ಪಂದನೆ ಅತ್ಯುತ್ತಮವಾಗಿದ್ದು, ಈ ಉಪಚುನಾ ವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿ ಗೆಲುವು ಖಚಿತ ಎಂಬ ಭಾವನೆ ಮೂಡಿಸಿದೆ.

ಈ ಚುನಾವಣಾ ಪ್ರಚಾರ ಸಭೆಯಲ್ಲಿ ಜಿಲ್ಲಾಧ್ಯಕ್ಷರಾದ ನಂಜಯ್ಯ ಮಠ , ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಜೆ ಟಿ ಪಾಟೀಲ್, ಹಾಗೂ ಸ್ಥಳೀಯ ಮುಖಂಡರು ಪಾಲ್ಗೊಂಡಿದ್ದರು.

# ರೈಲು ನಿಲ್ದಾಣದಲ್ಲಿ ಅಪರಿಚಿತ ಶವ ಪತ್ತೆ

ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2-** ಇಲ್ಲಿನ ಪಶ್ಚಿಮ ಪೊಲೀಸ್ ಠಾಣೆ ವ್ಯಾಪ್ತಿಯ ರೈಲ್ವೇ ಸ್ಟೇಷನ್ ಏರಿಯಾದ ಗೂಡ್ ಶೇಡ್‌ನಲ್ಲಿ ಮಾರ್ಚ್ 28ರ ಸಂಜೆ 5.30ಗಂಟೆ ಸುಮಾರಿಗೆ ಅಂದಾಜು 45-50 ವರ್ಷ ವಯಸ್ಸಿನ ಅಪರಿಚಿತ ಪುರುಷನ ಶವ ಕಂಡುಬಂದಿದ್ದು, ಸಂಬಂಧಿಕರ ಪತ್ತೆಗೆ ಪಶ್ಚಿಮ ಪೊಲೀಸ್ ಠಾಣೆಯ ಅಧಿಕಾರಿಗಳು ಕೋರಿದ್ದಾರೆ.

ಅಪರಿಚಿತ ಮೃತನ ಹೆಸರು, ವಿಳಾಸ ತಿಳಿದು ಬಂದಿಲ್ಲ. ವ್ಯಕ್ತಿಯ ವಯಸ್ಸು 45-50 ವರ್ಷ, 5.5 ಎತ್ತರ ದುಂಡು ಮುಖ, ಗೋದಿ ಮೈ ಬಣ್ಣ ಮೈಬಣ್ಣ ಚಹರೆ ಹೊಂದಲಾಗಿದೆ.

ಮೃತನ ಮಾಹಿತಿ ತಿಳಿದು ಬಂದಲ್ಲಿ ಪಶ್ಚಿಮ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 08532-232507 ಅಥವಾ ಪಶ್ಚಿಮ ಪೊಲೀಸ್ ಠಾಣೆಯ ಪಿ.ಎಸ್.ಐ ಮೊಬೈಲ್ ಸಂಖ್ಯೆ: 9480803847 ಗೆ ಸಂಪರ್ಕಿಸುವಂತೆ ಪಶ್ಚಿಮ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜಿಲ್ಲೆಯಲ್ಲಿ ತಾಪಮಾನ ಹಿನ್ನೆಲೆ: ಬದಲಾದ ಸರ್ಕಾರಿ ಕಚೇರಿ ಸಮಯ

# ನಿಗದಿತ ಸಮಯಕ್ಕೆ ಕಚೇರಿಯಲ್ಲಿರಲು ಜಿಲ್ಲಾಧಿಕಾರಿ ಖಡಕ್ ಸೂಚನೆ

ಕನ್ನಡ ಮಾತೃ ಭೂಮಿ ವಾರ್ತೆ



**ವಿಜಯಪುರ,ಏ.2-** 2026ನೇ ಸಾಲಿನ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಹೆಚ್ಚಿನ ಬಿಸಿಲಿನ ತಾಪ ಮಾನ ಹಿನ್ನೆಲೆಯಲ್ಲಿ ಏಪ್ರಿಲ್.1ರಿಂದ ಜಿಲ್ಲೆಯಲ್ಲಿ ಸರಕಾರಿ ಕಚೇರಿ ಸಮಯ ಬದಲಾವಣೆಯಾಗುತ್ತಿದ್ದಂತೆಯೇ, ಬುಧವಾರ ಬೆಳಗ್ಗೆಯೇ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ. ಅವರು ನಗರದ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಸೇರಿದಂತೆ ವಿವಿಧ ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲಿಸಿ,ಅಧಿಕಾರಿ, ಸಿಬ್ಬಂದಿ ಹಾಜರಾತಿ ಪರಿಶೀಲಿಸಿದರು.

ಕಚೇರಿ ಸಮಯ ಬದಲಾವಣೆ ಹಿನ್ನೆಲೆಯಲ್ಲಿ ಬುಧವಾರ ನಗರದ ವಿವಿಧ ಇಲಾಖೆಗಳ ಕಚೇರಿಗೆ ದಿಢೀರ್ ಭೇಟಿ ನೀಡಿ, ಸಿಬ್ಬಂದಿ ಹಾಜರಾತಿ ಪರಿಶೀಲನೆ ನಡೆಸಿದರು.

ಎಲ್ಲ ಅಧಿಕಾರಿ,ಸಿಬ್ಬಂದಿ ನಿಗದಿತ ಸಮಯಕ್ಕೆ ಕಚೇರಿಗೆ ಹಾಜರಾಗಬೇಕು. ದೈನಂದಿನ ಕಚೇರಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಯಾವುದೇ ಸಿಬ್ಬಂದಿ ಯಾವುದೇ ಕಡತ:ವಹಿ ಬಾಕಿ ಉಳಿಸಿಕೊಳ್ಳದೇ ಕಾರ್ಯ ನಿರ್ವಹಿಸುವ ಮೂಲಕ ಕಡತಗಳನ್ನು ವಿಲೇವಾರಿಯಲ್ಲಿ ಪ್ರಗತಿ ಸಾಧಿಸಬೇಕು ಎಂದು ಸೂಚಿಸಿದರು.

ಸಾರ್ವಜನಿಕರಿಗೆ ಸ್ಪಂದಿಸಿ: ತಮ್ಮ ಎಂದಿನ ಕೆಲಸ ಕಾರ್ಯಗಳಿಗೆ ಆಯಾ ಕಚೇರಿಗೆ ಆಗಮಿಸುವ ಸಾರ್ವಜನಿಕರಿಗೆ ಸ್ಪಂದನೆ ನೀಡಬೇಕು.ಅವರ ಸಮಸ್ಯೆಗಳನ್ನು ಸಹಾನುಭೂತಿಯಿಂದ ಆಲಿಸಿ ಎಂದರು. ಯಾವುದೇ ಲೋಪ-ದೋಷ ಉಂಟಾಗದಂತೆ ಕಾರ್ಯ ನಿರ್ವಹಿಸುವಂತೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

ನಿಗದಿತ ಸಮಯಕ್ಕೆ ಕಚೇರಿಯಲ್ಲಿರಲೇಕು: ಇದೇ ವೇಳೆ ಕಚೇರಿಯಲ್ಲಿ ಅಗತ್ಯ ಮೂಲಭೂತ ಸೌಲಭ್ಯ ವ್ಯವಸ್ಥೆ ಇರಬೇಕು. ಜೊತೆಗೆ ಕಚೇರಿ ಸಮಯಕ್ಕೆ ಸರಿಯಾಗಿ ಕಚೇರಿಗೆ ಹಾಜರಿರಬೇಕಾದುದು ಕಡ್ಡಾಯ. ಯಾವುದೇ ಕಚೇರಿಗೆ ಹಠಾತ್ ಭೇಟಿ ನೀಡಲಾಗುವುದು. ಕಚೇರಿಯ ವೇಳೆಯಲ್ಲಿ ಕಚೇರಿಯಲ್ಲಿದ್ದು ಕಡತಗಳನ್ನು ತಕ್ಷಣಕ್ಕೆ ವಿಲೇವಾರಿ ಮಾಡಬೇಕು ಎಂದು ಇದೇ ವೇಳೆ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳಿಗೂ ಜಿಲ್ಲಾಧಿಕಾರಿಗಳಾದ ಡಾ. ಆನಂದ ಕೆ.ಅವರು ಸೂಚಿಸಿದರು.

ಇಡೀ ಜಿಲ್ಲೆಯಾದ್ಯಂತ ಎಲ್ಲ ಸರ್ಕಾರಿ ಕಚೇರಿಗಳ ಸಿಬ್ಬಂದಿ ಬದಲಾದ ಸಮಯದಲ್ಲಿ ಕಚೇರಿಯಲ್ಲಿದ್ದುಕೊಂಡು ಯಾವುದೇ ಅಡೆತಡೆಯಿಲ್ಲದ ತಮ್ಮ ಕರ್ತವ್ಯ ನಿರ್ವಹಿಸಬೇಕು ಎಂದರು.

ಸರ್ಕಾರಿ ಕಚೇರಿ ಕೆಲಸಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಅನಾನುಕೂಲವಾಗದಂತೆ ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತುರ್ತು ಸಂದರ್ಭಗಳಲ್ಲಿ ಯಾವುದೇ ಕಾರ್ಯವನ್ನು ನಿರ್ವಹಿಸಲು ನಿರ್ದೇಶನ ನೀಡಿದರೆ ಸಮಯದ ಮಿತಿಯಿಲ್ಲದೇ ಕೆಲಸ ನಿರ್ವಹಿಸಬೇಕೆಂದು ಇದೇ ವೇಳೆ ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲ ಅಧಿಕಾರಿ ಹಾಗೂ ಸಿಬ್ಬಂದಿಗೆ ಸೂಚಿಸಿದರು.

# ಬೇಸಿಗೆ ನೀರಿನ ಸಮಸ್ಯೆ ತಡೆಗೆ ಸಂಡೂರಿನಲ್ಲಿ ಸಜ್ಜು: ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ

ಕನ್ನಡ ಮಾತೃ ಭೂಮಿ ವಾರ್ತೆ



**ಸಂಡೂರು (ಬಳ್ಳಾರಿ),ಏ.2-** ಬೇಸಿಗೆ ತೀವ್ರಗೊಳ್ಳುತ್ತಿರುವ ಹಿನ್ನೆಲೆ ಗ್ರಾಮೀಣ ಪ್ರದೇಶಗಳಲ್ಲಿ ಕುಡಿ ಯುವ ನೀರಿನ ಕೊರತೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಸಂಡೂರು ತಾಲೂಕಿನ ತಾಲೂಕು ಸಭಾಂಗಣದಲ್ಲಿ ಸಭೆ ನಡೆಯಿತು.

ತಹಶೀಲ್ದಾರ್ ಅನಿಲ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಮಡಗಿನ ಬಸಪ್ಪ ಮಾತನಾಡಿ, ಬೇಸಿಗೆ ಅವಧಿಯಲ್ಲಿ ಜನರಿಗೆ ನಿರಂತರವಾಗಿ ಶುದ್ಧ ಕುಡಿಯುವ ನೀರು ಒದಗಿಸುವುದು ಪ್ರಾಥಮಿಕ ಆದ್ಯತೆಯಾಗಿದ್ದು, ಯಾವುದೇ ರೀತಿಯ ನಿರ್ಲಕ್ಷ್ಯ ಸಹಿಸಲಾಗುವುದಿಲ್ಲ ಎಂದು ಎಚ್ಚರಿಸಿದರು.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬೋರ್‌ವೆಲ್‌ಗಳು, ಪೈಪ್‌ಲೈನ್‌ಗಳು ಹಾಗೂ ನೀರಿನ ಟ್ಯಾಂಕ್‌ಗಳ ಸಮರ್ಪಕ ನಿರ್ವಹಣೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ನೀರು ವ್ಯರ್ಥವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಸಹಾಯಕ ನಿರ್ದೇಶಕರಾದ ವಸಂತ್ ಕುಮಾರ್, ಮಹೇಶ್ ಸೇರಿದಂತೆ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಪಂಪ್ ಆಪರೇಟರ್‌ಗಳು ಭಾಗವಹಿಸಿದ್ದರು. ಗ್ರಾಮಗಳಲ್ಲಿ ನೀರು ಸರಬರಾಜು ಮಾಡುವ ನೀರು ಘಂಟಿಗಳು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ, ನೀರು ಪೋಲಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಲಾಯಿತು.

ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಪ್ರದೇಶಗಳನ್ನು ಮುಂಚಿತವಾಗಿ ಗುರುತಿಸಿ, ಪರ್ಯಾಯ ವ್ಯವಸ್ಥೆ ರೂಪಿಸುವಂತೆ ಹಾಗೂ ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುವ ವ್ಯವಸ್ಥೆಯನ್ನು ಸಿದ್ಧವಾಗಿಡಲು ಸೂಚಿಸಲಾಯಿತು.

ಸಭೆ ಕೊನೆಯಲ್ಲಿ ಎಲ್ಲಾ ಗ್ರಾಮ ಪಂಚಾಯಿತಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಜನತೆಗೆ ಯಾವುದೇ ತೊಂದರೆ ಉಂಟಾಗದಂತೆ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್ ಸೂಚಿಸಿದರು.

ಈ ಮೂಲಕ ಸಂಡೂರು ತಾಲೂಕು ಬೇಸಿಗೆ ಸವಾಲುಗಳನ್ನು ಎದುರಿಸಲು ಸಜ್ಜಾಗಿದೆ ಎಂಬ ವಿಶ್ವಾಸ ವ್ಯಕ್ತವಾಯಿತು.

# ಏ.5 ರಂದು ಪುಟ್ಟರಾಜ ಗವಾಯಿಗಳವರ ಜಯಂತೋತ್ಸವ,ಪ್ರಶಸ್ತಿ ಪ್ರಧಾನ



ಕನ್ನಡ ಮಾತೃ ಭೂಮಿ ವಾರ್ತೆ

**ಲಿಂಗಸಗೂರ,ಏ.02-** ಗಾನಯೋಗಿ ಲಿಂ. ಪಂ. ಪಂಚಾಕ್ಷರ ಗವಾಯಿಗಳವರ 135 ನೇ ಹಾಗೂ ಪದ್ಮ ಭೂಷಣ ಗಾನಯೋಗಿ ಶಿವಯೋಗಿ ಲಿಂಗೈಕ್ಯ ಡಾ. ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ 112 ನೇಯ ಜಯಂ ತ್ಯೋತ್ಸವ ಹಾಗೂ ಪ್ರಶಸ್ತಿ ಪ್ರಧಾನ ಮತ್ತು ಸಂಗೀತೋತ್ಸವ ಕಾರ್ಯಕ್ರಮ ಮತ್ತು ಪ. ಪೂ. ಡಾ. ಕಲ್ಲಯ್ಯ ಅಜ್ಜ ನವರ ತುಲಾಭಾರ ಕಾರ್ಯಕ್ರಮವು ಇದೇ ಏ.5 ರಂದು ಪಟ್ಟಣದ ಈಶ್ವರ ದೇವಸ್ಥಾನದಲ್ಲಿ ಶ್ರೀ ಗುರು ಪುಟ್ಟರಾಜ ಸಾಂಸ್ಕೃತಿಕ ಸಂಘದ ವತಿಯಿಂದ ಹಮ್ಮಿ ಕೊಳ್ಳಲಾಗಿದೆ ಎಂದು ಗುರು ಪುಟ್ಟರಾಜ ಸಾಂಸ್ಕೃತಿಕ ಸಂಘದ ಅಧ್ಯಕ್ಷ ವಿಶ್ವನಾಥ್ ಹೂಗಾರ್ ತಿಳಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾ ಗುವುದು.

ಷ.ಬ್ರ. ಅಮರೇಶ್ವರ ಗುರು ಅಭಿ ನವ ಗಜದಂಡ ಶಿವಾಚಾರ್ಯರು ತೋಪಿನ ಕಟ್ಟೆ ಸಂಸ್ಥಾನ ದೇವರ ಬೂಪೂರ ಇವರು ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಲಿದ್ದು. ಪರಮಪೂಜ್ಯ ಡಾ. ಕಲ್ಲಯ್ಯಜ್ಜನವರು ಪೀಠಾಧಿಪತಿಗಳು ಶ್ರೀ ವೀರೇ ಶ್ವರ ಪುಣ್ಯಾಶ್ರಮ ಗದಗ್ ದಾವಣಗೆರೆ ಇವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದ ಸಾನಿಧ್ಯವನ್ನು ಪರಮಪೂಜ್ಯ ಮುರುಗೇಂದ್ರ ಶಿವಯೋಗಿಗಳು ಸಿದ್ದರಾಮೇಶ್ವರ ಗುರುಮಠ ಯರಡೋಣಾ ಕ್ರಾಸ್, ಮಾತೋಶ್ರೀ ನಂದಿಕೇಶ್ವರಿ ಅಮ್ಮನವರು ಮಾತಾ ಮಾಣಿಕೇಶ್ವರಿ ಮಠ ಲಿಂಗಸಗೂರು ಇವರು ಸಾನಿಧ್ಯ ವಹಿಸಲಿದ್ದಾರೆ. ಶ್ರೀ ಗುರು ಪುಟ್ಟರಾಜ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ ವಿಶ್ವನಾಥ್ ಹೂಗಾರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಸಕ ಮಾನಪ್ಪ ವಜ್ಜಲ್ ಅವರು ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಿದ್ದಾರೆ. ಮಾಜಿ ಸಚಿವರಾದ ಅಮರೇಗೌಡ ಪಾಟೀಲ್ ಬಯ್ಯಾಪುರವರು ಸಂಗೀತ ಕಾರ್ಯಕ್ರಮವವನ್ನು ಉದ್ಘಾಟಸಲ್ಲಿದ್ದಾರೆ. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ್ ಬಯ್ಯಾಪುರ, ಮಾಜಿ ಶಾಸಕರಾದ ಡಿ ಎಸ್ ಹೂಲಗೇರಿ, ಪ್ರತಾಪ್ ಗೌಡ ಪಾಟೀಲ್ ಅವರು ಪ್ರಶಸ್ತಿ ಪುರಸ್ಕಾರವನ್ನು ನೆರವೇರಿಸಲಿ ದ್ದಾರೆ. ಬಸವೇಶ್ವರ ವಿ.ವಿ ಸಂಘದ ಆಡ ಳಿತ ಅಧಿಕಾರಿ ಬಸವಂತರಾಯ ಕುರಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಹಾಯಕ ಆಯುಕ್ತರದ ಬಸ ವಣ್ಣೆಪ್ಪ ಕಲಶೆಟ್ಟಿ, ಡಿವೈಎಸ್ಪಿ ದತ್ತಾತ್ರೇಯ ಕಾರ್ನಾಡ್, ತಹಸಿಲ್ದಾರ್ ಸತ್ಯಮ್ಮ, ಅಮರಗುಂಡಪ್ಪ ಮೇಟಿ, ಕರಿಯಪ್ಪ ವಜ್ಜಲ್, ರಾಜಾ ಶ್ರೀನಿವಾಸ್ ನಾಯಕ್ ( ಅಪ್ಪಯ್ಯ ದಣಿ ) ಪುರಸಭೆ ಮುಖ್ಯ ಅಧಿಕಾರಿ ನಟರಾಜ್ ಎಚ್‌ಎನ್, ಸಿದ್ದರಾಮಪ್ಪ ಸಾಹುಕಾರ್, ಸಿಪಿಐ ಹೊಸಕೇರಪ್ಪ, ಸೇರಿದಂತೆ ಕಾರ್ಯಕ್ರಮದಲ್ಲಿಯ ತುಲಾಭಾರಗಳ ಸೇವೆಯ ದಾನಿಗಳು, ಶ್ರೀ ಗುರು ಪುಟ್ಟರಾಜ ಸಾಂಸ್ಕೃತಿಕ ಸಂಘದ ಪೋಷಕರು, ಸಂಘದ ಪದಾಧಿಕಾರಿಗಳು ಸೇರಿದಂತೆ ಹಲವಾರು ಮುಖಂಡರು ಪಾಲ್ಗೊಳ್ಳಲಿ ದ್ದಾರೆಂದು ಅವರು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಶ್ರೀ ಗುರು ಪುಟ್ಟರಾಜ ಸಾಂಸ್ಕೃತಿಕ ಸಂಘದ ಪ್ರಧಾನ ಕಾರ್ಯದರ್ಶಿ ವಿಶ್ವೇಶ್ವರಯ್ಯ ಹಿರೇಮಠ, ಉಪಾಧ್ಯಕ್ಷರಾದ ಸಂಗ ಮೇಶ್ ಕುಂಬಾರ್, ಸಂಘಟನಾ ಕಾರ್ಯದರ್ಶಿ ನಾಗರಾಜ್ ಬಡಿಗೇರ್, ಯಮನೂರು ಹೂಗಾರ್, ಅಮರೇಶ್ ಹೂಗಾರ್, ಮಹಾಂತೇಶ್ ಹೂಗಾರ್, ಬಸಲಿಂಗಯ್ಯ, ಗಿರಿಧರ್ ಪೂ ಜಾ ರ್ ಸೇರಿದಂತೆ ಇತರರು ಉಪಸ್ಥಿತರಿ ದ್ದರು.

# ಇಂದಿನಿಂದ ಹಬ್ಬಗಳ ಸೌಹಾರ್ದ ಸಂಗಮ ಕಾರ್ಯಕ್ರಮ-ಪಂಪಯ್ಯಸ್ವಾಮಿ

**ಸಿಂಧನೂರು,ಮಾ.2-** ಸದ್ಭಾವನಾ ವೇದಿಕೆ ಸಿಂಧನೂರು,ಜಮಾಅತೆ ಇಸ್ಲಾಮೀ ಹಿಂದ್ ಸಿಂಧನೂರು,ಭಾವೈಕ್ಯ ಶಾಂತಿ ಸಂದೇಶ ಸಂಸ್ಥೆ ಸಿಂಧನೂರು ಇವರುಗಳ ಸಂಯುಕ್ತ ಆಶ್ರಯದಲ್ಲಿ ಹಬ್ಬಗಳ ಸೌಹಾರ್ದ ಸಂಗಮ ಕಾರ್ಯಕ್ರಮವು ಏ 3 ಮತ್ತು 4 ರಂದು ಸಂಜೆ 7ಕ್ಕೆ ನಗರದ ಕೊಟೆಯ ಮಿಲಾಪ್ ಶಾದಿ ಮಹಲ್ ನಲ್ಲಿನಡೆಯಲಿದೆಎಂದು ಭಾವೈಕ್ಯ ಶಾಂತಿ ಸಂದೇಶ ಸಂಸ್ಥೆ ಅಧ್ಯಕ್ಷರು ಪಂಪಯ್ಯಸ್ವಾಮಿ ಸಾಲಿಮಠ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಹೊಸ ವರ್ಷದ ಆರಂಭದ ಹಿನ್ನೆಲೆ ಹೊಂದಿರುವ ಮತ್ತು ಜೀವನವೆಂಬುದು ಕಷ್ಟ ಸುಖಗಳ, (ಬೇವು-ಬೆಲ್ಲ) ಸಂಗಮವೆಂದು ಸಾರುವ ಯುಗಾದಿ ಹಬ್ಬ ಮತ್ತು ಒಂದು ತಿಂಗಳ ಪರ್ಯಂತರವಾಗಿ ಉಪವಾಸದ ಮೂಲಕ ಸಹನೆ, ತಾಳ್ಮೆ, ಪ್ರೀತಿ, ತ್ಯಾಗ, ದಾನ ಧರ್ಮದ ಮೌಲ್ಯಗಳೊಂದಿಗೆ ಆಚರಿಸಿದ ರಂಜಾನ್ ಹಬ್ಬ ಈ ಎರಡು ಹಬ್ಬಗಳ ಪ್ರಯುಕ್ತ ಪರಸ್ಪರರಲ್ಲಿ ಸಹೋದರತ್ವ ಸಾಮರಸ್ಯ ಭಾವೈಕ್ಯತೆ ಮತ್ತು ಸದ್ಭಾವನೆಯನ್ನು ಸಮಾಜದಲ್ಲಿ ಮತ್ತಷ್ಟು ಗಟ್ಟಿಗೊಳಿಸಲು ಈ ಹಬ್ಬಗಳ ಸೌಹಾರ್ದ ಸಂಗಮ ಈ ಕಾರ್ಯಕ್ರಮಕ್ಕೆ ಶ್ರೀ ಮಹಾಂತಸ್ವಾಮಿಗಳು ಸಾಲಿಮಠ ಮುದಗಲ್ ಖ್ಯಾತ ಪ್ರವಚನಕಾರರು, ಕಲ್ಯಾಣಾಶ್ರಮ ತಿಮ್ಮಾಪುರ, ಮುಹಮ್ಮದ್ ಕುಂಞ ಖ್ಯಾತ ಪ್ರವಚನಕಾರರು ಮಂಗಳೂರು, ಡಾ. ಮಧುಮತಿ ದೇಶಪಾಂಡೆ ನಿವೃತ್ತ ಉಪನ್ಯಾಸಕಿ ಸಿಂಧನೂರು ಇವರುಗಳು ವೇದಿಕೆ ಹಂಚಿಕೊಳ್ಳಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸ್ಥಳೀಯ ಹಂಪನಗೌಡ ಬಾದರ್ಲಿ,ಮಾಜಿ ಸಂಸದ ಕೆ.ವಿರೂಪಾಕ್ಷಪ್ಪ,ಕೆ ಓ ಎಫ್ ರಾಜ್ಯಾ ಧ್ಯಕ್ಷರಾದ ವೆಂಕಟರಾವ್ ನಾಡಗೌಡ,ಎಂ ಎಲ್ ಸಿ ಬಸನಗೌಡ ಬಾದರ್ಲಿ, ರೈತ ಮುಖಂಡ ಹನುಮನಗೌಡ ಬೆಳಗುರ್ಕಿ, ಬಿಜೆಪಿ ಮುಖಂಡ ಕೆ.ಕರಿಯಪ್ಪ ಸೇರಿದಂತೆ ಅನೇಕ ಮುಖಂಡರು

### ಮಂಜುನಾಥ ಉಪನ್ಯಾಸಕರಿಗೆ ಕೆ.ಶಿವನಗೌಡ ನಾಯಕರವರ ಅಭಿಮಾನಿ ಬಳಗದ ವತಿಯಿಂದ ಅಭಿನಂದನೆ

# ಜೀವನದಲ್ಲಿ ಯಶಸು ಸಾಧಿಸಲು ಜ್ಞಾನ ಅತ್ಯಂತ ಮುಖ್ಯ - ಅನಂತರಾಜ ನಾಯಕ



ಕನ್ನಡ ಮಾತೃ ಭೂಮಿ ವಾರ್ತೆ

**ಅರಕೇರಾ,ಏ.01-** ಜೀವನದಲ್ಲಿ ಯಶಸ್ಸು ಸಾಧಿಸಲು ಜ್ಞಾನ ಅತ್ಯಂತ ಮುಖ್ಯ ನಿರಂತರ ಕಲಿಕೆಯ ಮೂಲಕ ವಿವಿಧ ಕ್ಷೇತ್ರಗಳಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ಅನುಗು ಣವಾಗಿ ಜ್ಞಾನವನ್ನು ನವೀಕರಿಸಿಕೊಳ್ಳ ಬೇಕು ಎಂದು ಬಿಜೆಪಿ ಹಿರಿಯ ಮುಖಂಡರಾದ ಕೆ.ಅನಂತರಾಜ ನಾಯಕ ಹೇಳಿದರು.

ಅವರು ಅರಕೇರಾ ಪಟ್ಟಣದಲ್ಲಿನ ಸಿದ್ದಯ್ಯ ಹವಲ್ದಾರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗೌರವ ಡಾಕ್ಟರೇಟರ್ ಪದವಿ ಪಡೆದಿರುವ ಇಂಗ್ಲೀಷ ಉಪನ್ಯಾಸಕರಾದ ಮಂಜುನಾಥ ಇವರಿಗೆ ಕೆ.ಶಿವನಗೌಡನಾಯರವರ್ ಅಭಿಮಾನಿ ಬಳಗದವತಿಯಿಂದ ಹಮ್ಮಿಕೊಂಡಿದ್ದ ಅಭಿನಂದಾನ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು ಗುಲ್ಬರ್ಗಾ ವಿಶ್ವವಿದ್ಯಾಲಯದ 43ನೇ ಘಟಿಕೋತ್ಸವದಲ್ಲಿ ಮಂಜುನಾಥ ಉಪನ್ಯಾಕಸರು ಇಂಗ್ಲೀಷ ವಿಷಯದಲ್ಲಿ ಪಿ ಎಸ್ ಡಿ ಗೌರವ (ಡಾಕ್ಟರೇಟ್) ಪದವಿಯನ್ನು ರಾಜ್ಯದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಘಟಿಕೋತ್ಸವದಲ್ಲಿ ಡಾಕ್ಟರೇಟ್ ಪದವಿ ಪ್ರದಾನ ಸ್ವೀಕರಿಸಿದ್ದುನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ. ಮಂಜುನಾಥ ಉಪನ್ಯಾಸಕರು ಇನ್ನೂ ಉನ್ನತ ಹುದ್ದೆಗಳು ಲಭಿಸುವಂತಾಗಲಿ ಎಂದು ಹಾರೈಸಿದರು.

ಕೆ.ಶಿವನಗೌಡನಾಯಕ ಅವರ ಅವಧಿಯಲ್ಲಿ ದೇವದುರ್ಗ ಮತ್ತು ಅರಕೇರಾ ತಾಲೂಕಿನಲ್ಲಿ ವಿವಿಧ ಗ್ರಾಮಗಳಲ್ಲಿ ಶಾಲಾ ಕಾಲೇಜು ,ಆಶ್ರಮಶಾಲೆ ,ವಸತಿ ನಿಲಯಗಳ ಕಟ್ಟಡಗಳು ನಿರ್ಮಾಣ ಗೊಂಡಿವೆ ಅಲ್ಲದೇ ಗ್ರಾಮೀಣಾ ಭಾಗದ ರಸ್ತೆ,ಕುಡಿಯುವ ನೀರು ಸೇರಿದಂತೆ ಸಾಕಷ್ಟು ಅಭಿವೃದ್ದಿಗೊಂಡಿವೆ. ಕ,ಶಿವನಗೌಡ ನಾಯಕರವರ ನೇತೃತ್ವದಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಮತ್ತು ಶೈಕ್ಷಣಿಕ ಸುಧಾರಣೆಗಳಿಗೆ ಕೆ.ಎಸ್ ಎನ್ ಬಳಗವು ಸದಾ ಸಕ್ರೀಯವಾಗಿರುತ್ತದೆ

ಡಾ. ಎಚ್ ಎ.ನಾಡಗೌಡ ರಾಯಚೂರು ರಿಮ್ಸ್ ಮಾಜಿ ನಾಮನಿರ್ದೇಶಿತ ಸದಸ್ಯರು ಮಾತನಾಡಿ ಮಂಜುನಾಥ ಉಪನ್ಯಾಸಕರು ಡಾ. ಪದವಿ ಪಡೆದಿದ್ದು ನಮ್ಮ ಅರಕೇರಾ ತಾಲೂಕಿಗೆ ಹೆಮ್ಮೆಯ ವಿಷಯವಾಗಿದ್ದು ಇವರ ಈ ಸಾಧನೆ ನಮ್ಮ ಗ್ರಾಮೀಣಾ ಪ್ರದೇಶದ ಯುವ ಜನತೆಗೆ ಸ್ಪೂರ್ತೀಯಾಗಲಿ ಎಂದರು.

ವೆಂಕಟೇಶನಾಯಕ ದೊರೆ ಅರಕೇರಾ ಬಿಜೆಪಿ ನಗರ ಘಟಕ ಅಧ್ಯಕ್ಷರು ಗೌರವ ಡಾಕ್ಟರೇಟರ್ ಪದವಿ ಪಡೆಯುವದು ಸುಲಭ ಮಾರ್ಗವಲ್ಲ,ಮೇಲಾಗಿ ಇದಕ್ಕಾಗಿ ವಿಶೇಷ ಸಂಶೋಧನೆ ಮತ್ತು ಕಠಿಣ ಪರಿಶ್ರಮ ಹಾಗೂ ವಿಷಯ ಮಂಡನೆಯ ಆಧಾರದ ಮೇಲೆ ಡಾಕ್ಟರೇಟರ್ ಪದವಿ ನೀಡಲಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಟ್ಟಣದ ಮುಖಂಡರಾದ ಸತ್ಯನಾರಾಯಣ ನಾಯಕ ಪೋಲಿಸ್ ಪಾಟೀಲ್. ಕೆ.ಭಗವಂತ್ರಾಯನಾಯಕ. ಸೀತಣ್ಣನಾಯಕ ಗುರಿಕಾರ, ಹನುಮಂತ್ರಾಯ ಪೂಜಾರಿ ,ಜಾವೀದ್ ಆರ್ ಚಿಂಚೋಳಿಕರ್. ಪ್ರಾಚಾರ್ಯರಾದ ಬುದ್ದಿವಂತಿ, ಮೋನಪ್ಪ ಅರಕೇರಾ ತಾಲೂಕು ಅಧ್ಯಕ್ಷರು ಬಂಜಾರ ಸಮಾಜ ಹಾರೂನ್ ಅರಕೇರಾ ಮಂಡಲದ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರು ,ನಾಗರಾಜಕರ್ನಾಳ, ರವಿ ನಾಯಕ, ತನುಜಕುಮಾರ ಕುರುಕುಂದಿ, ಅಬ್ದುಲ್ ಮಾಜಿಧ್,ದೇವಿಂದ್ರನಾಯಕ ಜುಟ್ಟಮರಡಿ.

ವೆಂಕಟೇಶನಾಯಕ ಕರ್ನಾಳ. ಬೀಮಣ್ಣನಾಯಕ ಕೋಣ ಚಪ್ಪಳಿ.ವಿಶ್ವನಾಥ ಹೋಸಮನಿ, ಬೀಮಣ್ಣನಗರ, ತಿಮ್ಮಣ್ಣ ಗುರಿಕಾರ, ವಿರೇಶಬೇರಿ, ಬಸವ ಉಪ್ಪಾರ,ಯಲ್ಲಪ್ಪ ಕರ್ನಾಳ ಸುರೇಶ,ಸಂಗಮೇಶ ಬಂಡೆ ಗುಡ್ಡ, ರಮೇಶ ಪವಾರ, ಬೂದೆಪ್ಪ ರಮೇಶ ಪವಾರ ಸೇರಿದಂತೆ ಕೆ,ಶಿವನಗೌಡನಾಯಕ ಅಭಿಮಾನಿ ಬಳಗದವರು ಉಪಸ್ಥಿತರಿದ್ದರು.ಸ್ವಾಗತ ಬುದ್ದಿವಂತಿ ಪ್ರಾಚಾರ್ಯರು ಪ್ರಾಸ್ತವಿಕ ನುಡಿ ಆಂಜನೇಯ್ಯ ಉಪನ್ಯಾಸಕರು ನಿರೂಪಸಿ, ಕೊನೆಯಲ್ಲಿ ಸರ್ವರ್ ಖಾನ್ ವಂದಿಸಿದರು.

# ಏ.8ರಂದು ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ

ಕನ್ನಡ ಮಾತೃ ಭೂಮಿ ವಾರ್ತೆ

**ರಾಯಚೂರು,ಏ.2-** ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳು ಹಾಗೂ ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಏಪ್ರಿಲ್ 8ರ ಬೆಳಿಗ್ಗೆ 10.30ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಈ ಸಭೆಗೆ ಅಗತ್ಯ ಮಾಹಿತಿ ಹಾಗೂ ದಾಖಲೆಗಳೊಂದಿಗೆ ಸಂಬಂದಪಟ್ಟ ಅಧಿಕಾರಿಗಳು ಖುದ್ದಾಗಿ ಹಾಜರಾಗುವಂತೆ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ...ಮೊದಲನೇ ಪುಟದಿಂದ

## ಮಗನ ಸಾವಿಗೆ ತಾನೇ ಕಾರಣ ಎಂದು ಟೆಕ್ಕಿ ತಾಯಿ ಆತ್ಮಹತ್ಯೆ

ಮಗುವಿನ ಮೃತದೇಹಗಳ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಚಂದ್ರಾಲೇಔಟ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೃತ ತಾಯಿ ಪ್ರತಿಭಾ ಖಾಸಗಿ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದರು. ಕೆಲ ತಿಂಗಳಿಂದ ವರ್ಕ್ ಫ್ರಂ ಹೋಮ್ ನಲ್ಲಿ ಕೆಲಸ ಮಾಡುತ್ತಿದ್ದರು. ಬೆಳಗಾವಿ ಮೂಲದ ಪತಿ ಮಹಾಂತೇಶ್ ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ದಂಪತಿಗೆ ಮದುವೆಯಾಗಿ ಆರು ವರ್ಷವಾಗಿತ್ತು. ಚಂದ್ರಾಲೇಔಟ್‌ನ ಭೈರವೇಶ್ವರ ನಗರದಲ್ಲಿ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಆಗಿದ್ದೇನು ? ಎಂದಿನಂತೆ ಮಹಾಂತೇಶ್ ಬುಧವಾರ ಕೆಲಸಕ್ಕೆ ಹೋಗಿದ್ದರು. ಮನೆಯಲ್ಲಿ ವರ್ಕ್ ಫ್ರಂ ಹೋಮ್ ಮಾಡುತ್ತಿದ್ದ ಪ್ರತಿಭಾ ಟೆರೇಸ್‌ನಲ್ಲಿ ಒಣಗಲು ಹಾಕಿದ್ದ ಬಟ್ಟೆ ತೆಗೆದುಕೊಳ್ಳಲು ಮಗುವನ್ನ ಬಿಟ್ಟು ಹೋಗಿದ್ದರು. ಆಟವಾಡುತ್ತಿದ್ದ ಮಗು ಬಚ್ಚಲು ಮನೆಗೆ ಹೋಗಿ ನೀರಿದ್ದ ಬಕೆಟ್‌ನಲ್ಲಿ ಉರುಳಿಬಿದ್ದಿದೆ. ಉಸಿರಾಟ ಸಮಸ್ಯೆಯಿಂದ ಮಗು ಕ್ಷಣಾರ್ಧದಲ್ಲಿ ಮೃತಪಟ್ಟಿದೆ. ತಾಯಿ ವಾಪಸ್ ಮನೆಗೆ ಬಂದಾಗ ವಿಚಾರ ತಿಳಿದು ಆತಂಕಗೊಂಡಿದ್ದಾಳೆ. ನನ್ನ ನಿರ್ಲಕ್ಷ್ಯದಿಂದಾಗಿ ಮಗು ಸಾವನ್ನಪ್ಪಿದೆ ಎಂದು ಭಾವಿಸಿ ಮನೆಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಕೆಲಸ ಮುಗಿಸಿ ಸಂಜೆ ಮಹಾಂಶೇಶ್ ಮನೆಗೆ ಬಂದು ಬಾಗಿಲು ತಟ್ಟಿದರೂ ಬಾಗಿಲು ತೆರೆದಿರಲಿಲ್ಲ. ಅನುಮಾನಗೊಂಡು ತನ್ನ ಬಳಿಯಿದ್ದ ಮತ್ತೊಂದು ಬೀಗದ ಕೀ ಬಳಸಿ ಮನೆಯೊಳಗೆ ಹೋದಾಗ ದುರ್ಘಟನೆ ನಡೆದಿರುವುದು ಬೆಳಕಿಗೆ ಬಂದಿದೆ. ಘಟನಾ ಸ್ಥಳದಲ್ಲಿ ಖಾಲಿಯಾಗಿದ್ದ 15 ಮಾತ್ರೆಗಳ ಪ್ಯಾಕೆಟ್ ಪತ್ತೆಯಾಗಿದೆ. ಜೊತೆಗೆ ಡೆತ್ ನೋಟ್ ಸಹ ಸಿಕ್ಕಿದೆ ಎಂದು ಪೊಲೀಸರು ಹೇಳಿದ್ದಾರೆ.

ನನ್ನ ಮಗುವಿನ ಸಾವಿಗೆ ನಾನೇ ಕಾರಣ: ಮಗು ಸಾವನ್ನಪ್ಪಿದ್ದ ಹಿನ್ನೆಲೆಯಲ್ಲಿ ಆತಂತಕ್ಕೊಳಗಾಗಿದ್ದ ಪ್ರತಿಭಾ ಆತ್ಮಹತ್ಯೆಗೆ ಮುನ್ನ ಡೆತ್ ನೋಟ್ ಬರೆದಿದ್ದಾರೆ. ನಾನು ಬಟ್ಟೆ ಒಣಹಾಕಿದ್ದೆ, ಅದನ್ನು ತರಲು ಟೆರೇಸ್‌ಗೆ ಹೋಗಿದ್ದೆ. ಈ ವೇಳೆ ಮಗು ಅಗಸ್ತ್ಯ ಆಟವಾಡಿಕೊಂಡು ಬಚ್ಚಲು ಮನೆಗೆ ಹೋಗಿ ಬಕೆಟ್‌ನಲ್ಲಿದ್ದ ನೀರಿಗೆ ಮುಳುಗಿ ಸಾವನ್ನಪ್ಪಿದೆ. ನನ್ನ ಮಗುವನ್ನು ಉಳಿಸಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. ನನ್ನ ಮಗುವಿನ ಸಾವಿಗೆ ನಾನೇ ಕಾರಣ. ಹಾಗಾಗಿ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ ಎಂದು ಡೆತ್ ನೋಟ್‌ನಲ್ಲಿ ಉಲ್ಲೇಖಿಸಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

## ತೇಜಸ್ ಸ್ಟಾರ್ಟ ಅಪ್ ಕಾರ್ಯಾಗಾರ: ಕೈಗಾರಿಕೆಗಳ ಸ್ಟಾರ್ಟ ಅಪ್ ಉತ್ತೇಜನಗೊಂಡಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಸಾಧ್ಯ-ಬೋಸರಾಜ

ನಂತಹ ಮಹಾನಗರಗಳಿಗೆ ಸೀಮಿತವಾಗಿತ್ತು. ಗ್ರಾಮೀಣ ಮಟ್ಟದಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಉದ್ದೇಶದಿಂದ ದೇಶದಲ್ಲೇ ಮೊದಲ ಬಾರಿಗೆ ತೇಜಸ್ ಸ್ಟಾರ್ಟ್‌ಅಪ್ ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದರು. ಈ ಕಾರ್ಯಕ್ರಮವು ಉದ್ಯಮಶೀಲತೆಯನ್ನು ಮಹಾನಗರಗಳ ಮಿತಿಯಿಂದ ಹೊರತಂದು ಗ್ರಾಮೀಣ ಹಾಗೂ ಆಕಾಂಕ್ಷಿ ಜಿಲ್ಲೆಗಳವರೆಗೆ ವಿಸ್ತರಿಸುವ ಉದ್ದೇಶ ಹೊಂದಿದೆ. ಯುವಕರು, ಮಹಿಳೆಯರು ಹಾಗೂ ಮೊದಲ ತಲೆಮಾರಿನ ಉದ್ಯಮಿಗಳಿಗೆ ಅವಕಾಶ ಕಲ್ಪಿಸುವುದೇ ಇದರ ಮುಖ್ಯ ಗುರಿಯಾಗಿದೆ ಇತ್ತೀಚೆಗೆ ದೊಡ್ಡ ದೊಡ್ಡ ಕಂಪನಿಗಳು ಅಲ್ಲಿನ ನೌಕರರನ್ನು ತೆಗೆದುಹಾಕುತ್ತಿದ್ದು, ಅಂತವರಿಗೆ ಸ್ಟಾರ್ಟ್‌ಅಪ್ ಅತ್ಯಂತ ಅನುಕೂಲವಾಗಲಿದೆ ಎಂದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರಕುಮಾರ ಕಾಂದೂ, ವಾಣಿಜ್ಯೋದ್ಯಮಿಗಳಾದ ವಿಷ್ಣುಕಾಂತ ಭುತಡ, ಡಾ.ರಮೇಶ, ಸಾವಿತ್ರಿ ಪುರುಷೋತ್ತಮ, ಲಕ್ಷ್ಮೀರೆಡ್ಡಿ, ಎಸ್.ಕಮಲಕುಮಾರ, ಸಂಪನ್ಮೂಲ ವ್ಯಕ್ತಿಗಳಾದ ರೋಹನ್ ಸಚದೇವ, ರವಿ ವೇರವಾಣಿ, ಇಶ್ದೀಪ್ ಸಿಂಗ್, ಆಕಾಂಶ ಗುಪ್ತಾ, ಭರತ್ ಚಂದ್ರ, ಸಿಎಂ ಪಾಟೀಲ್ ಸೇರಿದಂತೆ ಅನೇಕರಿದ್ದರು.

## ಕೆಪಿಸಿಎಲ್: 233 ಹುದ್ದೆಗಳಿಗೆ ನೇಮಕಾತಿ ಆದೇಶ ವಿತರಿಸಿ, ಸ್ಥಳ ನಿಯುಕ್ತಿ- ಗೌರವ್ ಗುಪ್ತಾ

ನೂತನವಾಗಿ ನೇಮಕಗೊಂಡ ಅಭ್ಯರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಗುಪ್ತಾ, ಮುಖ್ಯಮಂತ್ರಿಗಳು, ಇಂಧನ ಸಚಿವರ ಸಹಕಾರದಿಂದ ಕೆಪಿಸಿಎಲ್‌ನಲ್ಲಿ ಈ ನೇಮಕಾತಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸಾಧ್ಯವಾಗಿದೆ. 233 ಹುದ್ದೆಗಳಿಗೆ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲಾಗಿದೆ. ನಿಗಮಕ್ಕೆ ನೇಮಕಗೊಂಡಿರುವ ಯುವ ಇಂಜಿನಿಯರ್‌ಗಳು ತಮ್ಮ ಕೌಶಲ್ಯದಿಂದ ಕೆಪಿಸಿಎಲ್‌ನ ಪ್ರತಿಷ್ಠೆ ಹೆಚ್ಚಿಸಬೇಕು. ನೀವು ಬಂದಿರುವುದರಿಂದ ನಿಗಮದಲ್ಲಿ ಉತ್ತಮ ಬದಲಾವಣೆಗಳಾಗಬೇಕು ಎಂದು ಅವರು ಹೇಳಿದರು.

ಕೇವಲ ವೇತನಕ್ಕಾಗಿ ಕೆಲಸ ಮಾಡದೆ, ವಿದ್ಯುತ್ ಉತ್ಪಾದನೆಯಲ್ಲಿ ನಿಗಮವನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಪ್ರಯತ್ನ ನಿಮ್ಮಿಂದ ಆಗಬೇಕು. ಹೊಸದಾಗಿ ನೇಮಕಗೊಂಡಿರುವವರಿಗೆ ಉನ್ನತ ಹುದ್ದೆಗೇರಲು ಸಾಕಷ್ಟು ಅವಕಾಶಗಳಿದ್ದು, ನಿಗಮದಿಂದ ನೀವೇನು ಪಡೆದಿದ್ದೀರಿ ಎಂಬುದಕ್ಕಿಂತ ನಿಗಮಕ್ಕೆ ನಿಮ್ಮ ಕೊಡುಗೆ ಮುಖ್ಯವಾಗುತ್ತದೆ ಎಂಬುದನ್ನು ತಿಳಿದು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಕೆಪಿಸಿಎಲ್ ಅನ್ನು ಇನ್ನಷ್ಟು ಕ್ರಿಯಾಶೀಲಗೊಳಿಸಲು ನಮ್ಮ ಸರ್ಕಾರ ಆದ್ಯತೆ ನೀಡಿರುವುದರಿಂದ ಅದರ ಭಾಗವಾಗಿ ಈ ನೇಮಕಾತಿ ಮಾಡಲಾಗುತ್ತಿದೆ. ಈ ಮೂಲಕ ನಿಗಮವನ್ನು ಮತ್ತಷ್ಟು ಬಲಪಡಿಸಲು ಎಲ್ಲಾ ರೀತಿಯ ಸಹಕಾರ ನೀಡಲಾಗುತ್ತಿದೆ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

## ಯೋಜನೆಗಳು ಬೇರೆ ಜಿಲ್ಲೆಯ ಜನರಿಗೆ ತಲುಪಿಸಿ-ಖಾಸಿಂಸಾಬ್ ಎಳ್ಳೆಮನೆ

ಸಮುದಾಯ ಜನರಿಗೆ ತಲುಪುವಂತಾಗಬೇಕಿದೆ. ಈ ಕುರಿತು ಅನೇಕ ಬಾರಿ ಸರ್ಕಾರಕ್ಕೆ ಪತ್ರ ಬರೆದು ಮನವಿ ಮಾಡಲಾಗಿದೆ. ಆದರೂ ಕೆಲ ಜಿಲ್ಲೆಗಳಿಗೆ ಮಾತ್ರ ಅನುದಾನ ನೀಡಲಾಗುತ್ತಿದ್ದು ಅಸಮತೋಲನೆ ನಿವಾರಣೆ ಮಾಡಿ ಎಲ್ಲಾ ಜಿಲ್ಲೆಗಳಿಗೂ ಸರ್ಕಾರದ ಯೋಜನೆಗಳನ್ನು ತಲುಪಿಸಬೇಕೆಂದರು. ಈ ಸಂದರ್ಬದಲ್ಲಿ ಶಾಮೀದ್ ಅಲಿ, ಹಸನ ಅಂಜಳ ಇದ್ದರು.

## ಡಿ.ಕೆ.ಶಿವುಕುಮಾರ ಮುಖ್ಯಮಂತ್ರಿಯಾಗಲಿ ಎಂದು ಪ್ರಾರ್ಥಿಸಿ ಅಭಿಮಾನಿಗಳಿಂದ ವಿಶೇಷ ಪೂಜೆ

ಅವರಿಗೆ ಅಧಿಕಾರ ದೊರೆಯಲೆಂದು ದೇವರಲ್ಲಿ ಪ್ರಾರ್ಥಿಸಲಾಗಿದೆ ಎಂದರು. ಓಂ ಸಾಯಿ ಧ್ಯಾನಮಂದಿರದ ಧರ್ಮಾಧಿಕಾರಿ ಸಾಯಿಕಿರಣ ಆದೋನಿ ಮಾತನಾಡಿ ಭಕ್ತರ ಇಷ್ಟಾರ್ಥ ಪೂರೈಸುವ ಸಾಯಿಬಾಬಾರಬಳಿ ಕಾಂಗ್ರೆಸ್ ಕಾರ್ಯಕರ್ತರು ಬೇಡಿಕೆಯಿಟ್ಟು ಪೂಜೆಸಲ್ಲಿಸಿದ್ದಾರೆ. ಶೀಘ್ರದಲ್ಲಿಯೇ ಇಡೇರಿಸಲಿ ಎಂದು ಹಾರೈಸಿದರು. ಈ ಸಂದರ್ಬದಲ್ಲಿ ಸಾಗರ್, ಸಾಧಿಕ್ ಯರಗೇರಾ, ಉಸ್ಮಾನ್, ರಸೂಲ್, ಸಂಗಯ್ಯ, ಅಲಿ, ರಾಮು ಸೇರಿ ಅನೇಕರಿದ್ದರು.

## ನೀರಿನ ಟ್ಯಾಂಕ್ ಸ್ವಚ್ಚಗೊಳಿಸದೇ ಹೊದಲ್ಲಿ ಕ್ರಮ-ಈಶ್ವರ ಕಾಂದೂ ಎಚ್ಚರಿಕೆ

591 ಪ್ಲಾಂಟ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, 153 ಘಟಕಗಳು ದುಸ್ಥಿತಿಯಲ್ಲಿವೆ. ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆಯಿಂದ ಪ್ರತಿ ಘಟಕದ ದುರಸ್ತಿಗೆ 50 ಸಾವಿರದಂತೆ ಈಗಾಗಲೇ 91 ಘಟಕಗಳಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಉಳಿದ ಘಟಕಗಳ ಸಣ್ಣ ಪುಟ್ಟ ದುರಸ್ತಿಗಳನ್ನು ಪಂಚಾಯತ್‌ನಿಂದ ಮಾಡಿಸಬೇಕು. ಮತ್ತು ಆರ್ ಓ ಪ್ಲಾಂಟ್‌ಗಳನ್ನು ಸ್ವಚ್ಛಗೊಳಿಸುತ್ತಿರಬೇಕು ಈ ಬಗ್ಗೆ ಆಯಾ ಪಂಚಾಯತ್ ಪಿಡಿಓಗಳು ನಿಗಾ ವಹಿಸಬೇಕು ಎಂದರು.

ಬೇಸಿಗೆ ಆರಂಭವಾಗುತ್ತಿರುವುದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸದಂತೆ ಮುಂಜಾಗ್ರತಾ ಕ್ರಮವಾಗಿ ಬೋರ್ ವೆಲ್, ಕುಡಿಯುವ ನೀರಿನ ಕೆರೆ, ಬಾವಿಗಳನ್ನು ಸುಸ್ಥಿತಿಯಲ್ಲಿರಿಸಿಕೊಳ್ಳುವ ಜವಾಬ್ದಾರಿ ಆಯಾ ತಾಲೂಕು ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯತ್ ಪಿಡಿಓ ಜವಾಬ್ದಾರಿಯಾಗಿರುತ್ತದೆ ಎಂದರು.

ಪ್ರತಿಯೊಂದು ಪಂಚಾಯತ್ ವ್ಯಾಪ್ತಿಯಲ್ಲಿರುವ ಓಎಚ್‌ಟಿ ನೀರಿನ ಟ್ಯಾಂಕ್‌ಗಳನ್ನು ನಿರಂತರವಾಗಿ ಸ್ವಚ್ಛಗೊಳಿಸಬೇಕು. ಸ್ವಚ್ಛಗೊಳಿಸಿದ ಬಗ್ಗೆ ರಿಜಿಸ್ಟರ್ ನಿರ್ವಹಿಸಬೇಕು. ಜೊತೆಗೆ ಜಿಪಿಎಸ್ ಫೋಟೊಗಳನ್ನು ಕೂಡ ದಾಖಲಗಳಾಗಿರಿಸಿಕೊಳ್ಳಬೇಕು. ಕಡ್ಡಾಯವಾಗಿ ಓಎಚ್‌ಟಿ ಟ್ಯಾಂಕ್‌ಗಳಲ್ಲಿ ಯಾವುದೇ ಕಲುಷಿತ ವಸ್ತು, ಪ್ರಾಣಿಗಳು ಬೀಳದಂತೆ ಮುಚ್ಚಳಗಳನ್ನು ಮುಚ್ಚಿರುವಂತೆ ನೋಡಿಕೊಳ್ಳಬೇಕು. ಆಯಾ ತಾಲೂಕು ಪಂಚಾಯತ್ ಇಓಗಳು ನಿಮ್ಮ ವೈಯಕ್ತಿಕ ಜವಾಬ್ದಾರಿಯೆಂದು ಕಾರ್ಯ ನಿರ್ವಹಿಸಬೇಕು ಎಂದರು.

ಜಿಲ್ಲೆಯಲ್ಲಿ ಬೇಸಿಗೆ ಕಾಲದಲ್ಲಿ ನೀರಿನ ಸಮಸ್ಯೆಯಾಗದಂತೆ ಎಲ್ಲರೂ ಮುಂಜಾಗ್ರತೆಯೊಂದಿಗೆ ಕೆಲಸ ನಿರ್ವಹಿಸಬೇಕು. ತುಂಗಭದ್ರಾ ಎಡದಂಡೆ ನಾಲೆಗೆ ನೀರು ಹರಿಸುತ್ತಿದ್ದು, ಎಲ್ಲಾ ಕೆರೆಗಳನ್ನು ತುಂಬಿಸಬೇಕು. ಪ್ರತಿ ವಾರ ಕುಡಿಯುವ ನೀರಿನ ಟಾಸ್ಕ್‌ಫೋರ್ಸ್ ಸಭೆ ಜರುಗಿಸಬೇಕು. ಜೂ.15 ರವರೆಗೆ ನೀರಿನ ಸಮಸ್ಯೆಯಾಗದಂತೆ ನಿಗಾವಹಿಸಬೇಕು ಎಂದರು.

ಜಿಲ್ಲೆಯ ಮಹತ್ವಕಾಂಕ್ಷೆಯ ಜಲಧಾರೆ ಯೋಜನೆ ಕೆಲವೇ ತಿಂಗಳುಗಳಲ್ಲಿ ಪೂರ್ಣಗೊಳ್ಳಲಿದೆ. ಅಲ್ಲಿಯವರೆಗೆ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡುವುದು ಆಯಾ ತಾಲೂಕಿನ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಅಧಿಕಾರಿಗಳು, ತಾಪಂ ಇಓಗಳು, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಸೂಚನೆ ಮೀರಿಯೂ ನಿರ್ಲಕ್ಷ್ಯವಹಿಸಿದರೆ, ಕಠಿಣ ಕ್ರಮಕ್ಕೆಗೊಳ್ಳಲಾಗುವುದಾಗಿ ಎಚ್ಚರಿಸಿದರು.

ಈ ವೇಳೆ ಜಿಪಂ ಉಪ ಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಜಿಪಂ ಮುಖ್ಯ ಲೆಕ್ಕಾಧಿಕಾರಿ ವಿಜಯಶಂಕರ, ಜಿಪಂ ಮುಖ್ಯ ಯೋಜನಾಧಿಕಾರಿ ಟಿ.ರೋಣಿ, ವಿವಿಧ ಇಲಾಖೆಗಳ ಅಧಿಕಾರಿಗಳು, ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ಉಪಸ್ಥಿತರಿದ್ದರು.

# ಇಎಂಐ ಸೌಲಭ್ಯದಲ್ಲಿ 7 ಜ್ಯೋತಿರ್ಲಿಂಗಗಳನ್ನು ವೀಕ್ಷಿಸುವ ಅದ್ಭುತ ಅವಕಾಶ ಐಆರ್‌ಸಿಟಿಸಿಯಿಂದ ಕೈಗೆಟುಕುವ ದರದಲ್ಲಿ ಭರ್ಜರಿ ಪ್ರವಾಸ

**ನವದೆಹಲಿ,ಏ.2-**ಧಾರ್ಮಿಕ ಪ್ರವಾಸೋದ್ಯಮವನ್ನು ಉತ್ತೇಜಿಸುವ ಹಾಗೂ ತೀರ್ಥಯಾತ್ರೆಗಳನ್ನು ಕೈಗೊಳ್ಳಲು ಭಾರತೀಯ ರೈಲ್ವೆ ಇಲಾಖೆಯು ತುಂಬಾ ಸುಲಭವಾಗಿಸುವ ಗುರಿ ಹೊಂದಿದೆ. ಈ ನಿಟ್ಟಿನಲ್ಲಿ ಏಪ್ರಿಲ್ 27ರಿಂದ ಮೇ 8ರವರೆಗೆ ಶಿವನಿಗೆ ಸಮರ್ಪಿತವಾದ ಏಳು ಪವಿತ್ರ ಜ್ಯೋತಿರ್ಲಿಂಗಗಳಿಗೆ ಭೇಟಿ ನೀಡಲು ಭಾರತ್ ಗೌರವ್ ಪ್ರವಾಸಿ ರೈಲನ್ನು ಬುಕ್ ಮಾಡುವ ಭಕ್ತರಿಗೆ ಇಎಂಐ ಸೌಲಭ್ಯವನ್ನು ಪರಿಚಯಿಸಿದೆ.



ರೈಲ್ವೆ ಇಲಾಖೆಯ ಪ್ರವಾಸಿ ರೈಲು ದೇಶಾದ್ಯಂತ ಏಳು ಜ್ಯೋತಿರ್ಲಿಂಗಗಳಿಗೆ ಭೇಟಿ ನೀಡಲು ಅವಕಾಶ ಕಲ್ಪಿಸಿದೆ. ಇದರಿಂದ ಭಕ್ತರು ಸುರಕ್ಷಿತ ಮತ್ತು ಅನುಕೂಲಕರ ಪ್ರಯಾಣದ ಅನುಭವ ಆನಂದಿಸುತ್ತಾ ಭಾರತದೊಳಗೆ ಆಧ್ಯಾತ್ಮಿಕ ಪ್ರಯಾಣವನ್ನು ಕೈಗೊಳ್ಳಲು ಅನುವು ಮಾಡಿಕೊಟ್ಟಿದೆ. ಉಖಐ ಪಾವತಿಗಳ ಪರಿಚಯವು ಕೈಗೆಟುಕುವಿಕೆಯತ್ತ ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಭಕ್ತರು ಒಂದೇ ಬಾರಿಗೆ ಪಾವತಿ ಮಾಡುವ ಬದಲು ಕಾಲಾನಂತರದಲ್ಲಿ ಪ್ರಯಾಣದ ವೆಚ್ಚವನ್ನು ಹಂತುಗಳಲ್ಲಿ ಪಾವತಿಸಲು ಅನುವು ಮಾಡಿಕೊಡುತ್ತದೆ. ಈ ಉಪಕ್ರಮವು ವ್ಯಾಪಕ ಶ್ರೇಣಿಯ ಯಾತ್ರಿಕರನ್ನು ಆಕರ್ಷಿಸುವ ನಿರೀಕ್ಷೆಯಿದೆ. ವಿಶೇಷವಾಗಿ ಈ ಹಿಂದೆ ಅಂತಹ ಪ್ರಯಾಣವನ್ನು ಆರ್ಥಿಕವಾಗಿ ಸವಾಲಾಗಿ ಕಂಡುಕೊಂಡಿರಬಹುದು.

**ಮಹಾಕಾಳೇಶ್ವರ ಜ್ಯೋತಿರ್ಲಿಂಗ :** ಈ ಪ್ರವಾಸಿ ರೈಲು ಎಲ್ಲವನ್ನೂ ಒಳಗೊಂಡ ಪ್ರಯಾಣದ ಅನುಭವ ನೀಡಲು ವಿನ್ಯಾಸಗೊಳಿಸಲಾಗಿದೆ. ಸಾಮಾನ್ಯವಾಗಿ ರೈಲು ಪ್ರಯಾಣ, ವಸತಿ, ಊಟ, ಸ್ಥಳೀಯ ಸಾರಿಗೆ ಮತ್ತು ಮಾರ್ಗದರ್ಶಿ ದೃಶ್ಯವೀಕ್ಷಣೆಯ ಪ್ಯಾಕೇಜ್‌ಗಳನ್ನು ಒಳಗೊಂಡಿರುತ್ತದೆ. ಅನುಕೂಲತೆ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಸಂಯೋಜಿಸುವ ಮೂಲಕ ಈ ರೈಲು ಧಾರ್ಮಿಕ ಪ್ರವಾಸಿಗರಲ್ಲಿ ಜನಪ್ರಿಯ ಆಯ್ಕೆಯಾಗಿ ಹೊರಹೊಮ್ಮಿದೆ.

**ರೈಲು ಪ್ರಯಾಣದ ವಿವರ:** ಐಆರ್‌ಸಿಟಿಸಿ ತಿಳಿಸುವ ಪ್ರಕಾರ, ರೈಲು ಗೋರಖ್‌ಪುರ ರೈಲು ನಿಲ್ದಾಣದಿಂದ ಹೊರಡುತ್ತದೆ. ಪ್ರಯಾಣವು ಏಳು ಜ್ಯೋತಿರ್ಲಿಂಗಗಳನ್ನು ಒಳಗೊಂಡಿದೆ. ಮಹಾಕಾಳೇಶ್ವರ ಜ್ಯೋತಿರ್ಲಿಂಗ ಮತ್ತು ಓಂಕಾರೇಶ್ವರ ಜ್ಯೋತಿರ್ಲಿಂಗ (ಮಧ್ಯಪ್ರದೇಶದ ಉಜ್ಜಯಿನಿಯಲ್ಲಿದೆ), ದ್ವಾರಕಾಧೀಶ, ಬೆಟ್ ದ್ವಾರಕ, ನಾಗೇಶ್ವರ ಜ್ಯೋತಿರ್ಲಿಂಗ, ಸಿಗ್ನೇಚರ್ ಸೇತುವೆ ಮತ್ತು ಸೋಮನಾಥ ಜ್ಯೋತಿರ್ಲಿಂಗ (ಗುಜರಾತ್‌ನಲ್ಲಿ), ತ್ರಯಂಬಕೇಶ್ವರ ಜ್ಯೋತಿ ರ್ಲಿಂಗ, ಪಂಚವಟಿ ಹಾಗೂ ಕಲಾರಾಮ್ ದೇವಾಲಯ (ಮಹಾರಾಷ್ಟ್ರದ ನಾಸಿಕ್‌ನಲ್ಲಿ), ಭೀಮಾಶಂಕರ ಜ್ಯೋತಿರ್ಲಿಂಗ ಮತ್ತು ಗೃಷ್ಣೇಶ್ವರ ಜ್ಯೋತಿರ್ಲಿಂಗ (ಛತ್ರಪತಿ ಸಂಭಾಜಿನಗರದಲ್ಲಿ), ಜೊತೆಗೆ ಇತರ ಸ್ಥಳೀಯ ದೇವಾಲಯಗಳಿಗೆ ಭೇಟಿ ನೀಡುತ್ತದೆ.

**ನಾಗೇಶ್ವರ ಜ್ಯೋತಿರ್ಲಿಂಗ :** ಯಾತ್ರಿಕರಿಗೆ ಇಎಂಐ ಎಲ್‌ಟಿಸಿ ಸೌಲಭ್ಯಗಳು: ಭಾರತೀಯ ರೈಲ್ವೆ ಅಡುಗೆ ಮತ್ತು ಪ್ರವಾಸೋದ್ಯಮ ನಿಗಮದ ಹಿರಿಯ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿ, ಇಎಂಐನಲ್ಲಿ ಪ್ರವಾಸವನ್ನು ಬುಕ್ಕಿಂಗ್ ಮಾಡುವುದು ಸರಳ ಹಾಗೂ ಸಂಪೂರ್ಣವಾಗಿ ಡಿಜಿಟಲ್ ಆಗಿದೆ. ಪ್ರಯಾಣಿಕರು ಅಧಿಕೃತ ಪೋರ್ಟಲ್‌ಗೆ ಭೇಟಿ ನೀಡುವ ಮೂಲಕ ಅಗತ್ಯವಿರುವ ಪ್ರವಾಸ ವಿವರಗಳನ್ನು ನಮೂದಿಸಿ ಮತ್ತು ಆದ್ಯತೆಯ ಪಾವತಿ ಆಯ್ಕೆಯನ್ನು ಆರಿಸುವ ಮೂಲಕ ಉಖಐ ಸೌಲಭ್ಯವನ್ನು ಪಡೆಯಬಹುದು. ನಂತರ ವ್ಯವಸ್ಥೆಯು ಪೂರ್ಣ ಪಾವತಿ ಮತ್ತು ಉಖಐ ನಡುವೆ ಆಯ್ಕೆಯನ್ನು ನೀಡುತ್ತದೆ. ಬುಕ್ಕಿಂಗ್‌ನಲ್ಲಿ ಹೆಚ್ಚಿನ ನಮ್ಯತೆಯನ್ನು ಸಕ್ರಿಯಗೊಳಿಸುತ್ತದೆ ಎಂದು ತಿಳಿಸಿದರು.

ಇಎಂಐ ಅನ್ನು ಆಯ್ಕೆ ಮಾಡಿದ ನಂತರ, ಪ್ರಯಾಣಿಕರು ತಮ್ಮ ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ವಿವರಗಳನ್ನು ನಮೂದಿಸಬೇಕಾಗುತ್ತದೆ. ನಂತರ ಸಂಬಂಧಪಟ್ಟ ಬ್ಯಾಂಕ್ ಗ್ರಾಹಕರ ಕ್ರೆಡಿಟ್ ಪ್ರೊಫೈಲ್ ಅನ್ನು ನಿರ್ಣಯಿಸುತ್ತದೆ.

ಕ್ರೆಡಿಟ್ ಮೌಲ್ಯಮಾಪನವು ತೃಪ್ತಿಕರವಾಗಿದ್ದರೆ, ಪ್ರಯಾಣಿಕರ ಆದ್ಯತೆಯ ಮರುಪಾವತಿ ಅವಧಿಯ ಆಧಾರದ ಮೇಲೆ ಬ್ಯಾಂಕ್ ಸಾಲದ ಮೊತ್ತವನ್ನು ಅನುಮೋದಿಸುತ್ತದೆ. ಆನ್‌ಲೈನ್ ಬುಕಿಂಗ್‌ನೊಂದಿಗೆ ಹಣಕಾಸಿನ ಈ ಸರಾಗವಾದ ಏಕೀಕ ರಣವು ಯಾತ್ರಿಕರು ತಮ್ಮ ಪ್ರಯಾಣವನ್ನು ಹೆಚ್ಚಿನ ಆರ್ಥಿಕ ಹೊರೆಯಾಗದಂತೆ ಹಾಗೂ ಸುಲಭವಾಗಿ ಯೋಜಿಸಬಹುದು ಎಂದು ಖಚಿತಪಡಿಸುತ್ತದೆ ಎಂದರು.

ಇದಲ್ಲದೇ, ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವ ಪ್ರವಾಸಿ ರೈಲಿನಲ್ಲಿ ಪ್ರಯಾಣಕ್ಕಾಗಿ ಪ್ರಯಾಣಿಕರು ರಜೆ ಪ್ರಯಾಣ ರಿಯಾಯಿತಿ ಸೌಲಭ್ಯವನ್ನು ಪಡೆಯಬಹುದು. ಪ್ಯಾಕೇಜ್‌ನ ಬುಕ್ಕಿಂಗ್ ಅನ್ನು ಮೊದಲು ಬಂದವರಿಗೆ ಆದ್ಯತೆಯ ಆಧಾರದ ಮೇಲೆ ಸೀಟ್‌ಗಳನ್ನು ನೀಡಲಾಗುತ್ತದೆ ಎಂದು ತಿಳಿಸುತ್ತಾರೆ.

**ಒಟ್ಟು ಬರ್ತ್‌ಗಳು 751 (ವರ್ಗವಾರು):** 2 ಎಸಿ (ಒಟ್ಟು 49 ಸೀಟುಗಳು), 3 ಎಸಿ (ಒಟ್ಟು 210 ಸೀಟುಗಳು) ಹಾಗೂ ಸ್ಲೀಪರ್ ಕ್ಲಾಸ್ (ಒಟ್ಟು 492 ಸೀಟುಗಳು). ಬೋರ್ಡಿಂಗ್ ಮತ್ತು ಡಿ-ಬೋರ್ಡಿಂಗ್ ನಿಲ್ದಾಣಗಳು ಗೋರಖ್‌ಪುರ, ಮಂಕಾಪುರ, ರಾಯ್ ಬರೇಲಿ, ಲಕ್ನೋ, ಕಾನ್ಪುರ್ ಸೆಂಟ್ರಲ್, ಒರೈ, ವಿರಂಗನ ಲಕ್ಷ್ಮಿಬಾಯಿ ಝಾನ್ಸಿ, ಲಲಿತ್‌ಪುರ; ಅಯೋಧ್ಯಾ ಕ್ಯಾಂಟ್, ಸುಲ್ತಾನ್ ಪುರ, ಮಾ ಬೆಲ್ಹಾ ದೇವಿ ಧಾಮ್ ಪ್ರತಾಪ್‌ಗಢ ಹಾಗೂ ಪ್ರಯಾಗ್‌ರಾಜ್ ಸಂಗಮ್ ಆಗಿರುತ್ತವೆ. ಪ್ರಯಾಣವು ಏಪ್ರಿಲ್ 27 ರಿಂದ ಮೇ 8 ರವರೆಗೆ (11 ರಾತ್ರಿಗಳು ಹಾಗೂ 12 ದಿನಗಳು) ಇರುತ್ತದೆ.

**ಪ್ರಯಾಣದ ದರ ಸೌಲಭ್ಯಗಳು:** ರೈಲ್ವೆಯಿಂದ ನಿರ್ವಹಿಸಲ್ಪಡುವ ಪ್ರವಾಸಿ ರೈಲು, ಆರಾಮದಾಯಕ ತೀರ್ಥಯಾತ್ರೆಯ ಅನುಭವ ಖಚಿತಪಡಿಸಿಕೊಳ್ಳುವಾಗ, ವಿಭಿನ್ನ ಬಜೆಟ್‌ಗಳಿಗೆ ಸರಿಹೊಂದುವಂತೆ ವಿವಿಧ ವರ್ಗಗಳ ಸೀಟ್‌ಗಳನ್ನು ನೀಡಲಾಗುತ್ತದೆ. ಪ್ಯಾಕೇಜ್ 2 ಎಸಿ, 3 ಎಸಿ ಹಾಗೂ ಸ್ಲೀಪರ್ ಕ್ಲಾಸ್ ಕೋಚ್‌ಗಳಲ್ಲಿ ಪ್ರಯಾಣವನ್ನು ಒಳಗೊಂಡಿದೆ. ಜೊತೆಗೆ ಸಸ್ಯಾಹಾರಿ ಊಟ, ಉಪಹಾರ, ಮಧ್ಯಾಹ್ನ ಹಾಗೂ ರಾತ್ರಿಯ ಊಟವನ್ನು ಒಳಗೊಂಡಿದೆ. ಆಯ್ದ ವರ್ಗವನ್ನು ಅವಲಂಬಿಸಿ, ಭಕ್ತರಿಗೆ ಎಸಿ ಅಥವಾ ನಾನ್ ಎಸಿ ಬಸ್‌ಗಳ ಮೂಲಕ ಸ್ಥಳೀಯ ದೃಶ್ಯವೀಕ್ಷಣೆಯ ಸೌಲಭ್ಯವನ್ನು ಒದಗಿಸಲಾಗುತ್ತದೆ.

ಎಕಾನಮಿ ಕೆಟಗರಿ (ಸ್ಲೀಪರ್ ಕ್ಲಾಸ್): ಪ್ರತಿ ವ್ಯಕ್ತಿಗೆ ₹23,500 ಮತ್ತು ಮಕ್ಕಳಿಗೆ (5ರಿಂದ 11 ವರ್ಷಗಳು) ₹22,160 ಬೆಲೆಯ ಈ ವರ್ಗದಲ್ಲಿ ಸ್ಲೀಪರ್ ಕ್ಲಾಸ್ ರೈಲು ಪ್ರಯಾಣ, ಡಬಲ್ ಅಥವಾ ಟ್ರಿಪಲ್ ಹಂಚಿಕೆ ಆಧಾರದ ಮೇಲೆ ಎಸಿ ಅಲ್ಲದ ಹೋಟೆಲ್‌ಗಳಲ್ಲಿ ವಸತಿ, ಮೂಲಭೂತ ಶೌಚ ಮತ್ತು ಬಟ್ಟೆ ಬದಲಾಯಿಸಲು ಸೌಲಭ್ಯಗಳು ಹಾಗೂ ಎಸಿ ಅಲ್ಲದ ಸ್ಥಳೀಯ ಸಾರಿಗೆ ಸೇರಿವೆ. ಸ್ಟ್ಯಾಂಡರ್ಡ್ ಕೆಟಗರಿ (3ಅಇ ವರ್ಗ): ಇದಕ್ಕೆ ಪ್ರತಿ ವ್ಯಕ್ತಿಗೆ ₹40,000, ಮಕ್ಕಳಿಗೆ ₹38,430 ವೆಚ್ಚವಾಗುತ್ತದೆ. ಇದು 3ಅಇ ಕೋಚ್‌ಗಳಲ್ಲಿ ಪ್ರಯಾಣ, ಡಬಲ್/ಟ್ರಿಪಲ್ ಹಂಚಿಕೆ ಆಧಾರದ ಮೇಲೆ ಎಸಿ ಹೋಟೆಲ್‌ಗಳಲ್ಲಿ ವಾಸ್ತವ್ಯ, ಎಸಿ ಅಲ್ಲದ ಕೊಠಡಿಗಳಲ್ಲಿ ಮೂಲಭೂತ ಶೌಚ ಮತ್ತು ಬಟ್ಟೆ ಬದಲಾಯಿಸಲು ) ಸೌಲಭ್ಯಗಳು ಮತ್ತು ಎಸಿ ಅಲ್ಲದ ಸ್ಥಳೀಯ ಸಾರಿಗೆ ವ್ಯವಸ್ಥೆಗಳನ್ನು ಒಳಗೊಂಡಿದೆ.

ಕಂಫರ್ಟ್ ಕೆಟಗರಿ (2ಅಇ ವರ್ಗ): ಪ್ರೀಮಿಯಂ ಆಯ್ಕೆಯು ಪ್ರತಿ ವ್ಯಕ್ತಿಗೆ ₹53,260 ಮತ್ತು ಮಕ್ಕಳಿಗೆ ₹51,370 ಬೆಲೆಯದ್ದಾಗಿದೆ. ಇದು 2ಅಇ ರೈಲು ಪ್ರಯಾಣ, ಅಇ ಹೋಟೆಲ್‌ಗಳಲ್ಲಿ ವಸತಿ,

ಅಇ ಕೊಠಡಿಗಳಲ್ಲಿ ಮೂಲಭೂತ ಶೌಚ ಮತ್ತು ಬಟ್ಟೆ ಬದಲಾಯಿಸಲು ಸೌಲಭ್ಯಗಳು ಮತ್ತು ದೃಶ್ಯವೀಕ್ಷಣೆಗೆ ಅಇ ಸ್ಥಳೀಯ ಸಾರಿಗೆಯನ್ನು ನೀಡುತ್ತದೆ. ಬಹು ಬೆಲೆ ಶ್ರೇಣಿಗಳು ಮತ್ತು ಅಂತರ್ಗತ ಸೇವೆಗಳೊಂದಿಗೆ, ಈ ಟೂರ್ ಪ್ಯಾಕೇಜ್ ವ್ಯಾಪಕ ಶ್ರೇಣಿಯ ಯಾತ್ರಿಕರಿಗೆ ಅನುಕೂಲವನ್ನು ಒದಗಿಸುತ್ತದೆ, ಕೈಗೆಟುಕುವಿಕೆ ಮತ್ತು ಸೌಕರ್ಯವನ್ನು ಸಮತೋಲನಗೊಳಿಸುತ್ತದೆ.

# ನ್ಯಾಯಾಧೀಶರ ಮೇಲಿನ ದಾಳಿ ಖಂಡಿಸಿದ ಮಮತಾ ರಾಷ್ಟ್ರಪತಿ ಆಳ್ವಿಕೆಗಾಗಿ ಬಿಜೆಪಿ ಸಂಚು ಎಂದ ದೀದಿ

**ಸೂತಿ/ಸಾಗರ್ದಿ,ಏ.2-**ಮಾಲ್ಡಾದಲ್ಲಿ ನ್ಯಾಯಾಧೀಶರ ಮೇಲೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಬಿಜೆಪಿ ಮತ್ತು ಚುನಾವಣಾ ಆಯೋಗದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಂಗಾಳದಲ್ಲಿ ಅಶಾಂತಿಯನ್ನು ಹುಟ್ಟುಹಾಕಲು ಮತ್ತು ಅಂತಿಮವಾಗಿ ವಿಧಾನಸಭಾ ಚುನಾವಣೆಗೆ ಮುನ್ನ ರಾಷ್ಟ್ರಪತಿ ಆಡಳಿತಕ್ಕೆ ದಾರಿ ಮಾಡಿ ಕೊಡಲು ಪಿತೂರಿ ನಡೆಸಿದ್ದಾರೆ ಎಂದು ಮಮತಾ ಆರೋಪಿಸಿದ್ದಾರೆ.

ಮುರ್ಷಿದಾಬಾದ್ ಜಿಲ್ಲೆಯ ಸಾಗರ್ದಿಘಿ ಮತ್ತು ಸುತಿಯಲ್ಲಿ ನಡೆದ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದ ಬ್ಯಾನರ್ಜಿ, ಬಿಜೆಪಿಯ ಗಲಭೆಯ ಬಲೆಗೆ ಬೀಳದಂತೆ ಜನರನ್ನು ಕೇಳಿಕೊಂಡರು. ಚುನಾವಣಾ ಆಯೋಗ ನ್ಯಾಯಾಧೀಶರನ್ನು ರಕ್ಷಿಸಲು ವಿಫಲವಾಗಿದೆ ಎಂದು ದೂಷಿಸಿದರು ಮತ್ತು ಚುನಾವಣಾ ಆಯೋಗದ ಹಸ್ತಕ್ಷೇಪದ ನಂತರ ಆಡಳಿತಾತ್ಮಕ ಅಧಿಕಾರವನ್ನು ಕಸಿದುಕೊಂಡಿದ್ದರೂ ಸಹ ಅವರು ರಾಜಕೀಯವಾಗಿ ಹೋರಾಡುತ್ತಿದ್ದಾರೆ ಎಂದು ಪ್ರತಿಪಾದಿಸಿದರು.

ನನ್ನ ಅಧಿಕಾರಗಳನ್ನು ಕಸಿದುಕೊಳ್ಳಲಾಗಿದೆ ಮತ್ತು ಇದಕ್ಕೆ ಬಂಗಾಳವನ್ನು ದೂಷಿಸಲಾಗಿದೆ. ಮಾಲ್ಡಾ ಘಟನೆಯ ಬಗ್ಗೆ ಆಡಳಿತದಿಂದ ಯಾರೂ ನನಗೆ ಮಾಹಿತಿ ನೀಡಿಲ್ಲ ಎಂದು ಅವರು ಹೇಳಿದರು.

ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದು ಹಾಕಲಾಗಿದೆ ಎಂದು ಆರೋಪಿಸಿ, ವಿಶೇಷ ಸಮಗ್ರ ಪರಿಷ್ಕರಣೆ(ಖಐಖ)ಯಲ್ಲಿ ತೊಡಗಿರುವ ಏಳು ನ್ಯಾಯಾಧೀಶರಿಗೆ ಘೇರಾವ್ ಹಾಕಿರುವ ಘಟನೆಯನ್ನು ದೀದಿ ಉಲ್ಲೇಖಿಸಿದರು.

ಸುಪ್ರೀಂ ಕೋರ್ಟ್‌ನ ಅಭಿಪ್ರಾಯಗಳನ್ನು ಬೆಂಬಲಿಸಿದ ಮಮತಾ ಬ್ಯಾನರ್ಜಿ, ಸುಪ್ರೀಂ ಕೋರ್ಟ್ ಹಾಗೆ ಹೇಳಿದ್ದು ಸರಿಯಾಗಿಯೇ ಇದೆ ಎಂದರು.

ಎಸ್‌ಐಆರ್ ಡ್ರೈವ್ ಸಮಯದಲ್ಲಿ ಮಾಲ್ಡಾ ಜಿಲ್ಲೆಯಲ್ಲಿ ಏಳು ನ್ಯಾಯಾಧೀಶರಿಗೆ ದುಃಖಕರ ಘೇರಾವ್ ಮತ್ತು ದಾಳಿಯ ಬಗ್ಗೆ ನಿಷ್ಕ್ರಿಯತೆ ತೋರಿದ್ದಕ್ಕಾಗಿ ಪಶ್ಚಿಮ ಬಂಗಾಳ ಆಡಳಿತವನ್ನು ಸುಪ್ರೀಂ ಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿತು ಮತ್ತು ಸಿಬಿಐ ಅಥವಾ ಎನ್‌ಐಎಯಿಂದ ಸ್ವತಂತ್ರ ತನಿಖೆಗೆ ಆದೇಶಿಸಿದೆ.

ಘಟನೆಯನ್ನು ಖಂಡಿಸಿದ ಬ್ಯಾನರ್ಜಿ, ಜನರಿಗೆ ಪ್ರತಿಭಟಿಸುವ ಹಕ್ಕಿದೆ. ಆದರೆ ನ್ಯಾಯಾಧೀಶರು ಅಥವಾ ನ್ಯಾಯಾಂಗ ಅಧಿಕಾರಿಗಳನ್ನು ಯಾರೂ ಮುಟ್ಟಬಾರದು ಎಂದು ಹೇಳಿದರು ಮತ್ತು ಮಾಲ್ಡಾ ಘಟನೆಯನ್ನು ಇಡೀ ಬಂಗಾಳವನ್ನು ಕೆಣಕಲು ಬಳಸಲಾಗುತ್ತಿದೆ ಎಂದು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

## ಜಿಲ್ಲಾ ಪೊಲೀಸ್ ಧ್ವಜ ದಿನಾಚರಣೆ: ಪೊಲೀಸ್ ಧ್ವಜ ಕರ್ತವ್ಯ ನಿಷ್ಟೆಯ ಪ್ರತೀಕ-ಬಸವರಾಜ

ದ್ದು, 1965ರ ಎಪ್ರಿಲ್ 2ರಂದು ಕರ್ನಾಟಕದಲ್ಲಿ ಪೋಲೀಸ್ ಪಡೆ ಅಧಿಕೃತವಾಗಿ ರಚನೆಯಾದ ನೆನಪಿಗಾಗಿ ಈ ದಿನವನ್ನು ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರದಲ್ಲಿ ಆಚರಣೆಯನ್ನು ಮಾಡುತ್ತಾ ಬಂದಿವೆ. ಈ ಧ್ವಜವು ಶಿಸ್ತು, ಕರ್ತವ್ಯ ನಿಷ್ಠೆ, ಕಾನೂನು ಪಾಲನೆ ಮತ್ತು ರಕ್ಷಣೆಯ ಸಂಕೇತವಾಗಿದೆ. ಸಮಾಜದಲ್ಲಿ ಸಾರ್ವಜನಿಕರು ಮತ್ತು ಪೋಲೀಸರ ನಡುವಿನ ಬಾಂಧವ್ಯವನ್ನು ಬೆಳೆಸಲು ಅತಿ ಮುಖ್ಯವಾಗಿದೆ. ಇದನ್ನು ಪ್ರತಿ ವರ್ಷ ಪೋಲೀಸ್ ಧ್ವಜ ಟಿಕೇಟ್‌ಗಳನ್ನು ಮಾರಾಟ ಮಾಡಿ ಅದರಿಂದ ಬರುವ ಹಣವನ್ನು ಪೊಲೀಸ್ ಕಲ್ಯಾಣ ನಿಧಿಗೆ ಜಮಾ ಮಾಡಲಾಗುತ್ತದೆ ಎಂದರು.

ಪೋಲೀಸ ಕೆಲಸವೆಂದರೆ ಅಷ್ಟು ಸುಲಭದ ಕೆಲಸವಲ್ಲ. ಇದು ದೂರದ ಬೆಟ್ಟ ಕಣ್ಣಿಗೆ ಸುಂದರವಾಗಿರುತ್ತದೆ. ಪೊಲೀಸ್ ಕೆಲಸ ನೋಡುವವರಿಗೆ ಸುಂದರವಾಗಿ ಕಂಡರೂ, ಒಳಗಡೆ ಕಲ್ಲು, ಮುಳ್ಳು, ಕಷ್ಟ ಇದ್ದ ಹಾಗೇ ಕೆಲವು ತೊಂದರೆಗಳು ಇರುತ್ತವೆ. ಮತ್ತು ಬಿಸಿಲು, ಗಾಳಿ ಮಳೆ ಧೂಳು ಎನ್ನದೇ ಎಲ್ಲಾ ಸಂದರ್ಭದಲ್ಲಿ ಕರ್ತವ್ಯ ನಿರ್ವಹಿಸಬೇಕಾಗಿದೆ. ಸರಕಾರಿ ಹಾಗೂ ಸಾರ್ವತ್ರಿಕ ರಜೆ ಇದ್ದಾಗ ಉಳಿದವರಿಗೆ ಹಬ್ಬ, ಹರಿದಿನ ಜಾತ್ರೆ ಸಂಭ್ರಮಗಳನ್ನು ಆಚರಿಸುತ್ತಿದ್ದರೆ ಪೋಲೀಸರು ಮಾತ್ರ ಸಾರ್ವಜನಿಕರ ರಕ್ಷಣೆ ಸಲುವಾಗಿ ತಮ್ಮ ಕುಟುಂಬದ ಮನೆ ಬಿಟ್ಟು ಕರ್ತವ್ಯ ನಿರ್ವಹಿಸುತ್ತಾರೆ. ಹಾಗೂ ಕೆಲವು ಸಮಯದಲ್ಲಿ ನೀರು, ಊಟ, ನಿದ್ದೆ ಎನ್ನುವುದು ಸರಿಯಾದ ಸಮಯಕ್ಕೆ ಸಿಗುವುದಿಲ್ಲ. ಆದರೂ ಸಹ ಪೋಲೀಸರು ಎದೆಗುಂದದೇ ತಮ್ಮ ಕರ್ತವ್ಯ ನಿರ್ವಹಿಸುತ್ತಾರೆ.

ಇದೇ ವೇಳೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಷುಗಿರಿ ವರದಿ ವಾಚನ ನೀಡಿ, ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆಯನ್ನು ಹಾಗೂ ನಿವೃತ್ತ ಪೊಲೀಸ್ ಅಧಿಕಾರಿಗಳ ಕಲ್ಯಾಣ ದಿನವನ್ನು ಪ್ರತಿ ವರ್ಷ ಏಪ್ರಿಲ್ 2 ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಆಚರಿಸಲಾಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಅಧಿಕಾರಿ ಮತ್ತು ಸಿಬ್ಬಂದಿಯವರಿಗೆ ದಿನದ 24 ಗಂಟೆಗಳ ಕಾಲ ವಿಶ್ರಾಂತಿವಿಲ್ಲದೇ ಕರ್ತವ್ಯ ನಿರ್ವಹಿಸಿ, ಸಾರ್ವಜನಿಕರ ಆಸ್ತಿ ರಕ್ಷಣೆ ಮತ್ತು ಕಾನೂನು ಸುವ್ಯವಸ್ಥೆಯಲ್ಲಿ ತೊಡಗಿರುವ ಅಂಶ ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ ಎಂದರು.

2025-26ನೇ ಸಾಲಿನ ಸಾಲಿನಲ್ಲಿ ಆರೋಗ್ಯ ಭಾಗ್ಯ ಯೋಜನೆಡಿಯಲ್ಲಿ ಒಟ್ಟು 227 ಜನ ನಿವೃತ್ತ ಪೊಲೀಸ್ ಅಧಿಕಾರಿ, ಸಿಬ್ಬಂದಿಯವರಿಗೆ ವೈದ್ಯಕಿಯ ಚಿಕಿತ್ಸೆಯನ್ನು ಪಡೆದುಕೊಂಡಿದ್ದಾರೆ. 2025-26ನೇ ಸಾಲಿನಲ್ಲಿ ನಿವೃತ್ತ ಪೊಲೀಸ್ ಅಧಿಕಾರಿಗಳ ನಿಧಿಯಿಂದ 82 ಜನ ನಿವೃತ್ತ ಸಿಬ್ಬಂದಿಯವರಿಗೆ ವೈದ್ಯಕೀಯ ಚಿಕಿತ್ಸೆಗಾಗಿ ಒಟ್ಟು 9,13,812ರೂ.ಗಳನ್ನು ಪಾವತಿಸಲಾಗಿದೆ ಎಂದರು.

2025-26 ಸಾಲಿನಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಸಿಬ್ಬಂದಿಗಳಿಗೆ ನಿವೃತ್ತ ಪೊಲೀಸ್ ಅಧಿಕಾರಿಗಳ ನಿಧಿಯಿಂದ 15 ಜನ ನಿವೃತ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳಿಗೆ ಶವ ಸಂಸ್ಕಾರಕ್ಕಾಗಿ ಒಟ್ಟು 1,50,000 ರೂ.ಗಳನ್ನು ಪಾವತಿಸಲಾಗಿದೆ ಎಂದರು.

ಸಿಬ್ಬಂದಿಯವರ ಉಪಯೋಗಕ್ಕಾಗಿ ಪೊಲೀಸ್ ಕಲ್ಯಾಣ ಮಂಟಪ, ಗ್ರಂಥಾಲಯ ಹಾಗೂ ಜಿಮ್‌ಗಳು, ಸಬ್ಸಿಡರಿ ಪೊಲೀಸ್ ಕ್ಯಾಂಟಿನ್ ಕೆಲಸ ಮಾಡುತ್ತಿವೆ. ಅಲ್ಲದೆ ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ ಅಧಿಕಾರಿ, ಸಿಬ್ಬಂದಿಗಳು ಹಾಗೂ ಅವರುಗಳ ಪತ್ನಿ, ಮಕ್ಕಳಿಗೆ ಹಾಗೂ ತಂದೆ ತಾಯಿಯವರು ಸೇರಿ ಸುಮಾರು 955 ಜನರನ್ನು ಆರೋಗ್ಯ ಭಾಗ್ಯ ಯೋಜನೆಯಡಿಯಲ್ಲಿ ಚಿಕಿತ್ಸೆಯ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ ಎಂದರು.

ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆಯ ಅಂಗವಾಗಿ ಒಂದು ನಿಧಿಯನ್ನು ಮಾಡಿದ್ದು, ಈ ನಿಧಿಗಾಗಿ ಪೊಲೀಸ್ ಧ್ವಜಗಳನ್ನು ಮಾರಾಟ ಮಾಡಿ ಪೊಲೀಸ್ ಸಿಬ್ಬಂದಿಯವರಿಗೆ ಮತ್ತು ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸಲಾಗುವುದು.

ಈ ಹಣವನ್ನು ನಿವೃತ್ತ ಪೊಲೀಸ್ ಅಧಿಕಾರಿಗಳ ಹಾಗೂ ಕರ್ತವ್ಯದಲ್ಲಿದ್ದ ಸಿಬ್ಬಂದಿಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಉಪಯೋಗಿಸಲಾಗುತ್ತಿದ್ದು, ಎಲ್ಲರೂ ಈ ನಿಧಿಗೆ ಸಹಾಯ ಧನವನ್ನು ನೀಡಿ ಕಲ್ಯಾಣ ಕಾರ್ಯಕ್ರಮಗಳಿಗೆ ಸಹಕರಿಸಬೇಕೆಂದರು.

ಈ ಸಂದರ್ಭದಲ್ಲಿ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಕುಮಾರಸ್ವಾಮಿ, ಜಿ.ಹರೀಶ್, ಡಿವೈಎಸ್ಪಿಗಳಾದ ಪ್ರಮಾನಂದ ಘೋಡ್ಕೆ, ದತ್ತಾತ್ರೇಯ ಕಾರ್ನಾಡ್, ಸಿಪಿಐಗಳಾದ ಸಾಬಯ್ಯ, ಸೋಮಶೇಖರ, ಹನುಮಂತ ನಾಯಕ, ಮಹಾದೇವ ಪಂಚಮುಖಿ, ಬಸವರಾಜ ತೇರಿ, ಈರೇಶ ನಾಯಕ, ಬಸಪ್ಪ ಬಿಳಿಗೇರಿ, ಅಮರೇಶ ಜಗರಕಲ್, ರಂಗನಾಥ ಕೋಟೆ, ಪಿಎಸ್‌ಐಗಳಾದ ತಿಮ್ಮಣ್ಣ ನಾಯಕ, ಹುಲಿಗೇಶ್, ಸಣ್ಣ ವಿರೇಶ್, ಸಿದ್ದಪ್ಪ, ಮಹಮ್ಮದ್ ಇಸಾಕ್, ಉದಯ ಕುಮಾರ್, ಬಾಹುಬಲಿ, ಶ್ರೀಕಾಂತ್, ಬೀರಣ್ಣ, ನಾರಾಯಣ ಸೇರಿದಂತೆ ಇತರರು ಇದ್ದರು.

ಕಾರ್ಯಕ್ರಮದಲ್ಲಿ 6 ಪೊಲೀಸ್ ತುಕಡಿಗಳಿಂದ ಪಥ ಸಂಚಲನ, ರಾಷ್ಟ್ರ ಧ್ವಜ ಹಾಗೂ ಪೊಲೀಸ್ ಧ್ವಜದ ಆಗಮನ, ಮುಖ್ಯ ಅತಿಥಿಗಳಿಗೆ ಸನ್ಮಾನ ಮಾಡಲಾಯಿತು. ಅಚ್ಚುಕಟ್ಟಾಗಿ ಸಂಗೀತ ವಾದ್ಯವನ್ನು ಯಂಕಪ್ಪ ಅವರ ನೇತೃತ್ವದಲ್ಲಿ ನಿರ್ವಹಣೆ ಮಾಡಲಾಯಿತು. ಕಾರ್ಯಕ್ರಮ ನಿರೂಪಣೆಯನ್ನು ಮಲ್ಲಿಕಾರ್ಜುನ ಅವರು ನಿರ್ವಹಣೆ ಮಾಡಿದರು.

## ಏ.4 ರಂದು ಜಮಾಅತೆ ಇಸ್ಲಾಂ ಹಿಂದ್‌ನಿಂದ ಈದ್ ಸೌಹಾರ್ದ ಕೂಟ-ಸಲಿಂ ಪಾಷಾ

ಖಾನ್ ವಿಶೇಷ ಭಾಷಣ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಜಮಾಅತೆ ಇಸ್ಲಾಂ ಹಿಂದ್ ಮೊಹ್ಮದ್ ಕುಂಇ ವಹಿಸಲಿದ್ದಾರೆ. ಎಲ್ಲ ಸಮೂದಾಯ ಜನರು ಸೌಹಾರ್ದ ಕೂಟದಲ್ಲಿ ಬಾಗವಹಿಸುವಂತೆ ಮನವಿ ಮಾಡಿದರೆ. ಈ ಸಂದರ್ಬದಲ್ಲಿ ಜಮಾಅತೆ ಇಸ್ಲಾಂ ಹಿಂದ್ ಜಿಲ್ಲಾಧ್ಯಕ್ಷ ಮೊಹ್ಮದ್ ಅಸೀಮುದ್ದೀನ್ ಅಕ್ತರ್, ಅಬ್ದು.ಲ್ ಸಮದ್,ನಜೀರ್ ಅಹ್ಮದ್, ಅಬ್ದುಲ್ ರಹಿಂ ಇದ್ದರು.

OWNER, PUBLISHER, PRINTER BY: SHYAM SUNDER L. PUBLISHED FROM: H: NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA AND PRINTED AT: KANNADA MATHRUBHOOMI PRINTERS, SHOP NO: 5-3-6, HANUMAN TALKIES ROAD, OPP VAIKUNTAM TEMPLE, NETAJI NAGAR, RAICHUR-584101, DIST: RAICHUR, KARNATAKA, EDITOR BY: SHYAM SUNDER L